should take immediate action against such officers. Secondly, in Bangalore City Diary is not a position to take all the milk produced by the producers. Here the question is different because they want to produce powder out of the excess milk, I welcome that. But in Hubli Dharwar, poor people are not able to get even the necessary milk for their children. In almost all the local papers big articles and letters are published for the last one month but the local authorities have not taken care to improve the supply position. I therefore earnestly urge upon the government to take immediate steps to increase the supply of milk and prevent the adulteration and take action against the officers or agents who are a party to such misdoings.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ನಿನ್ನೆ ಐದೂವರೆ ಘಂಟೆಯಲ್ಲಿ ರೂಲ್ ೩೧೨ರ ಕೆಳಗೆ ನೋಟೀಸ್ ಬಂದಿದೆ. ಕೆಲವು ವಿಚಾರಗಳ ಬಗ್ಗೆ ಈಗಾಗಲೇ ಇನ್‌ಫರ್ಮೇಷನ್ ತರಿಸುತ್ತಾ ಇದ್ದೇನೆ. ಇದರ ಬಗ್ಗೆ ನಾನು ನಾಳೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ.

Matter under Rule 312

re: Incident occurred in front of the Bangalore University Senate Hall.

†Sri C.M. ARMUGAM (K.G.F.):—Sir, I am grateful for having permitted me to raise this issue under Rule 312. I am not going to deal with the merits and demerits of the decision taken by the Syndicate. I am only dealing with the Subject matter–*i.e.* what has happend yesterday. What has happened yesterday was a calculated attempt to molest a lady Director of Collegiate Education. It has been going on for some time. I would not have bothered if the students have taken some demonstration or agitation over certain issues. But what has happened yesterday was on organised attempt. It has been organised to attack the Vice Chancellor and the Director of Collegiate Education. There is a Member of the Senate, a frustrated Professor. Of Course, neither he has got wife or children. He is very unhappy. He feels happy and pleasure by creating troubles. This is a matter which has to be looked into by the Government. Mr. Subbayya Shetty is there as the Minister for Education. Ministers may come and ministers may go; but the Government is a continuity one. They should have got the information. When this lady went to the meeting Police were standing. Her hair was pulled; her hand bag was snatched and then somebody removed her saree also to see her beautiful parts of the body as was done to Droupathi in Mahabharatha. The same thing has been done to her yesterday. The Scheduled Caste woman who is the Director of Collegiate Education has been attacked and her saree has been removed. She has been abused by some people. They also abused her caste and said "you have the audacity to attend the meeting". This is the information passed on

by the Director herself. Where is the safety for a women of weaker section I want to bring to the notice of the House that for the last one year attrocities on the Scheduled Caste people are being committed increasingly. During the last one year 255 Scheduled Caste persons were murdered all over the country. They are more in number in Bihar, Madhya Pradesh and Rajasthan. In Bihar, Madhya Pradesh and Rajasthan 166 women belonging to Scheduled Caste were tied and raped. Is this the civilisation of India? Then where is the safety for these Scheduled Caste people? You may say that one can become IAS or IFS etc., But where is the safety for them? Is this the treatment you are giving to a lady officer belonging to the SC ? The other day Mr, Deve Gowda was speaking about the incident that took place at Holenarasipur. But what action the Government has taken ?

The other person who has been attacked was the Vice Chancellor Mr. Jayaram. He was the Secretary for Education in the Secretariat. I know him quite well. He is a good administrator and able man. He was also made a target of attack by those people. I am not here to blame the students. The Syndicate has taken a decision. The Members of the Syndicate should be held responsible for such decision. But I am charging the Police and the Government. Why there was no protection for them when they went for meeting? Is it because she belonged to SC she should be hampered and condemned; is it because we SC people keep quiet ? Do you think that they will not revolt against this ? It is a shame on the part of the Government. They kept quiet. I think by this time the Minister in charge should have resigned for not having given protection to the Vice Chancellor and the Director of Collegiate Education. Why you have not issued a statement condemning the incident. When once the agitation starts, it can go to any extent. That is the mentality of the students. But what you have done in this matter ? Though Police were there when the saree was being removed, they did not take action. They were all silent spectators. Probably they wanted to see the body of a woman. Most of us married-we know. We must see our wife as wife, but other women are like mothers to us. She is a highly qualified lady in the Scheduled Caste. She has got half-a-dozen degree to her credit. She had been to America also, and got some degrees. For her, this is the insult done by the society. Therefore my submission is that this is an organised attempt. They wanted to create trouble for this woman, and molest her. That too in the open University campus they wanted to attack and molest her. When the saree of Droupathi was removed there was Lord Krishna. But here, there is no Krishna at all either here or in Delhi. I want to ask-what is the protection given to the man and women of Scheduled

Caste? You may occupy any position. But still you are treated as Scheduled Caste and all sorts of illtreatment will be given to you. You may have the capacity, you may have the authority and you may have the ability, but still you will be ill treated and harassed. I have read Karl Marx one dozen times. I am unable to understand what is actually going on now. My Communist friends may be able to tell about it. This is what is happening today. There is a click working. Whether Congress (I) or Janata forms the Government, still there is a click working and it controls the entire thing. Therefore, I appeal to you and the Government and the people by and large to come forward to condemn this inhuman treatment meted out to a lady who is the Director of Collegiate Education. I appeal to Mr. Subbayya Shetty to take immediate action in this behalf. Why there was no police protection for the down trodden and also for the Vice Chancellor who wants to re-organise and streamline the administration of the University of Bangalore. With this I thank the chair and conclude.

†ಶ್ರೀ ಎಸ್. ಆರ್. ಬೊಮ್ಮಾಯಿ:—ಮಾನ್ಯ ಅಧ್ಯಕ್ಷತೆ, ಮಾನ್ಯ ಸದಸ್ಯರಾದಂತಹ ಆರ್ಮ್ಗಂರವರು ನಿನ್ನೆ ನಡೆದಂತಹ ಘಟನೆಯ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಆದರೆ ಅದರಲ್ಲಿ ಒಂದು ಮಾತು ಹೇಳಿದರು ಬೆಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಇದು ಮೊದಲು ಎಂದು ಆದರೆ ಈ ರೀತಿ ಅನೇಕ ಘಟನೆಗಳು ಹಿಂದೆ ಕೂಡ ನಡೆದಿವೆ. ಹಿಂದೆ ಶ್ರೀಮಾನ್ ವಿ, ಕ. ಗೋಕಾಕರು ಕಣ್ಣೀರು ಹಾಕಿದ್ದಾರೆ. ಶ್ರೀಮಾನ್ ಎಚ್. ನರಸಿಂಹಯ್ಯನವರು ರಾಜಿನಾಮೆ ಕೊಡಬೇಕಾಯಿತು. ಇಂತಹ ಅನೇಕ ಪ್ರಕರಣಗಳು ನಡೆಯುತ್ತಲೇ ಇವೆ, ಆದರೆ ಈ ಲೇಡಿ ಡೈರೆಕ್ಟರ್ ಬಗ್ಗೆ ಏನು ನಿನ್ನೆ ನಡೆದಂತಹ ಘಟನೆ ಇದೆ ಈ ಘಟನೆಯನ್ನು ನೋಡಿದರೆ ನಿಜವಾಗಿಯೂ ಹೇಳಬೇಕೆಂದರೆ ಕಳೆದ ಹಲವು ದಿವಸಗಳಿಂದ ಇಂತಹ ಘಟನೆಗಳು ನಡೆಯಬಹುದೆಂದು ಸೂಚನೆಗಳು ಇದ್ದವೆಂದು ಕೇಳಿದ್ದೇನೆ. ಆದರೆ ಇದರ ಬಗ್ಗೆ ಸರಿಯಾದ ಮುಂಜಾಗ್ರತಾ ಕ್ರಮವನ್ನು ಕೈಕೊಂಡಿದ್ದರೆ ಇಂತಹ ಕೃತ್ಯ ಮಾಡಲಿಕ್ಕೆ ಅವಕಾಶ ಉಂಟಾಗುತ್ತಿರಲಿಲ್ಲ. ಆದ್ದರಿಂದ ಇದರ ಬಗ್ಗೆ ಆಳವಾಗಿ ಅಧ್ಯಯನಮಾಡಿ ನೋಡಬೇಕು. ಶ್ರೀಮಾನ್ ಗೋಕಾಕ್‌ರವರು. ಶ್ರೀಮಾನ್ ನರಸಿಂಹಯ್ಯನವರು ಒಳ್ಳೆಯ ಅನುಭವಿ ವೈಸ್‌ಚಾನ್ಸಲರ್ ಆಗಿ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು ರಾಜಿನಾಮೆ ಕೊಡಬೇಕಾದರೆ ಇದರ ಹಿನ್ನಲೆ ಏನು ಇದೆ ?. ಅವರ ಹೆಸರು ಎಲ್ಲರಿ ಗೂ ಗೊತ್ತಿದೆ ಅದು ಈ ಸಭೆಯಲ್ಲಿ ಹೇಳುವ ಮಾತಲ್ಲ; ಹಾಗೂ ಅವಶ್ಯಕತೆಯೂ ಇಲ್ಲ. ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಈ ಘಟನೆ ನಮ್ಮ ನೀತಿಗೆ ಮತ್ತು ನಮ್ಮ ಜನತೆಗೆ ಕೀರ್ತಿ ತರುವಂತಹ ಪ್ರಸಂಗವಲ್ಲ, ಒಬ್ಬ ಭಾರತದ ಮಹಿಳೆ ಅದರಲ್ಲೂ ಕನ್ನಡದ ರಾಜಧಾನಿಯಲ್ಲಿ ಒಬ್ಬ ಮಹಿಳಾ ಡೈರೆಕ್ಟರ್ ಆಫ ಕೊಲೀಜಿಯೇಟ್ ಎಜುಕೇಷನ್ ಅವರಿಗೆ ಈ ರೀತಿ ಅಪಮಾನಕಾರಿಯಿದೆಯೆಂದರೆ ನಮ್ಮ ರಾಜಧಾನಿಯಲ್ಲಿ ಇದರಿಂದ ನಾವೆಲ್ಲರು ತಲೆತಗ್ಗಿಸಬೇಕಾಗುತ್ತದೆ. ಇದನ್ನು ಖಂಡನೆಮಾಡಬೇಕು. ಪುನಃ ಈ ರೀತಿಯಾದ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದು ಸರ್ಕಾರ, ಸಮಾಜ ನಾವು ನೀವು ಎಲ್ಲರೂ ಹೊರಬೇಕಾದಂತ ಜವಾಬ್ದಾರಿಯಾಗಿರುತ್ತದೆ. ಕೇವಲ ಸರ್ಕಾರದ ಮೇಲೆಯೇ ಜವಾಬ್ದಾರಿಯಿದೆಯೆಂದು ಹೇಳುವುದಿಲ್ಲ. ಈ ಸದನದ ಎಲ್ಲಾ ಸದಸ್ಯರ ಮೇಲೆ ಸಮಾಜದ ನಾಯಕರ ಮೇಲೆ ಈ ಜವಾಬ್ದಾರಿ ಇದೆ. ಇಂತಹ ಘಟನೆಗಳು ಹಿಂದಿನಿಂದ ನಡೆಯುತ್ತಲೇ ಬಂದಿವೆ, ಆದ್ದರಿಂದ ಇದರಲ್ಲಿ ವಾದ ವಿವಾದಕ್ಕೆ ಹೋಗುವುದು ಬೇಡ. ಎಲ್ಲಿಯವರೆಗೆ ಅಸ್ಪೃಶ್ಯತೆ ಹೋಗುವುದಿಲ್ಲ ಅಲ್ಲಿಯತನಕ ಇದರ ಬಗ್ಗೆ ಹೋರಾಟಮಾಡಬೇಕಾಗುತ್ತದೆ. ಇದು ಸಮಾಜಕ್ಕೆ ಒಂದು ಕಳಂಕಪ್ರಾಯವಾಗಿದೆ. ಇದರ ಬಗ್ಗೆ ನಮ್ಮ ಪ್ರಧಾನಿಯವರು ಇದು ಇನ್ನು ಐದುವರ್ಷಗಳಲ್ಲಿ ತೊಲಗಲೇ ಬೇಕೆಂದು ಹೇಳಿದ್ದಾರೆ. ನಿನ್ನೆ ನಡೆದಂತಹ ಘಟನೆಯ ಬಗ್ಗೆ ಕೂಡಲೇ ಸರ್ಕಾರದವರು ಕ್ರಮ ತೆಗೆದುಕೊಳ್ಳಲೇಬೇಕು. ಈ ರೀತಿ ನಡೆಯಬಹುದೆಂದು ಮೊದಲೇ ಗೊತ್ತಿದ್ದು ಪೊಲೀಸರು ಇದರ ಬಗ್ಗೆ ಸೂಕ್ತ ಮುಂಜಾಗ್ರತೆ ವಹಿಸದೆ ಇರುವುದು ನೋಡಿದರೆ ಅವರು ಕರ್ತವ್ಯ ಚ್ಯುತಿಮಾಡಿದ್ದಾರೆಂದು ಗೊತ್ತಾಗುತ್ತದೆ. ಆದ್ದರಿಂದ ಅವರ

ಮೇಲೆ ನಾಳೆ ನಾವು ಸಭೆಗೆ ಬರುವ ಮೊದಲೇ ಸಸ್‌ಪೆಂಡ್ ಮಾಡಿದ ಒಂದು ಆಜ್ಞೆಯಾಗಿರಬೇಕು. ಇದರ ಬಗ್ಗೆ ಯೋಗ್ಯ ವಿಚಾರಣೆ ನಡೆಯಬೇಕು. ಇದು ಒಂದು ರೀತಿಯ ಅಪಮಾನದ ವಿಚಾರ ಇದನ್ನು ಯಾರೋ ಬೆಂಬಲಿಸುತ್ತಾ ಇದ್ದಾರೆ. ಇದಕ್ಕೆ ಸರ್ಕಾರ ಅಂಜಬಾರದು ತಪ್ಪು ಮಾಡಿದ ವಿದ್ಯಾರ್ಥಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇನ್ನು ಯೂನಿವರ್ಸ್‌ಟಿ ಹಾಗೂ ಸಿಂಡಿಕೇಟ್‌ಗೆ ಇದರ ಜವಾಬ್ದಾರಿ ಸೇರಿದ್ದರೂ ಕೂಡ ಶಾಂತಿ ಮತ್ತು ರಕ್ಷಣೆ ಸರ್ಕಾರದ ಕರ್ತವ್ಯ. ಸಿಂಡಿಕೇಟ್ ನಿರ್ಣಯದಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದ್ದರೆ ಜಳುವಳಿ ಮಾಡಲಿ ಆದರೆ ಸಭೆಗೆ ಹೋಗುವವರನ್ನು ತಡೆದು ಈ ರೀತಿ ಅಪಮಾನ ಮಾಡಿರುವುದು ಯಾರಿಗು ಶೋಭೆ ತರುವುದಿಲ್ಲ. ಆದ್ದರಿಂದ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ. - (ಬಸವನಗುಡಿ) ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾನಿಯದ ಸೆನೆಟ್ ಹಾಲ್‌ನ ಹತ್ತಿರದ ದುರ್‌ಘಟನೆ ಖಂಡಿತವಾಗಿಯೂ ನಮಗೆ ಯಾರಿಗೂ ಕೀರ್ತಿ ತರುವುದಿಲ್ಲವೆಂದು ಹೇಳುತ್ತೇನೆ. ಶ್ರೀಮಾನ್ ಆರ್‌ಮುಗಮ್‌ರವರು ನಾವು ಎಲ್ಲರೂ ತಲೆತಗ್ಗಿಸಬೇಕಾದ ವಿಷಯವೆಂದು ಹೇಳುತ್ತೇನೆ. ಇನ್ನು ಇದರಲ್ಲಿ ಒಂದು ವಿಚಾರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾವು ಸ್ವಲ್ಪ ಮುಂದೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾದುದು ಅವಶ್ಯಕತೆ ಇದೆ. ಒಬ್ಬ ವಿದ್ಯಾವಂತರಾದಂತಹ ಒಬ್ಬ ಹರಿಜನ ಮಹಿಳೆಯನ್ನು ಈ ರೀತಿ ಅಪಮಾನ ಮಾಡಿರುವುದು ನಿಜವಾಗಿಯೂ ನಮ್ಮ ಮನೆಯ ಹೆಂಗಸರಿಗೂ ಅಪಮಾನ ಮಾಡಿದಂತೆ ಎಂದು ಭಾವಿಸಬೇಕಾಗುತ್ತದೆ. ಹಿಂದೆ ಒಂದು ಸಾರಿ ರಾಷ್ಟ್ರೀಯ ಕಾಲೇಜಿನ ಪ್ರಿನ್ಸಿಪಾಲ್‌ರಾಗಿದ್ದಂತಹವರನ್ನು ಇದೇ ರೀತಿ ಅಪಮಾನ ಮಾಡಿದ್ದರು, ಇದು ನಡೆಯುತ್ತಲೇ ಇದೆ. ಆದ್ದರಿಂದ ಯಾರೋ ತೆರೆಯಮರೆಯಲ್ಲಿ ಇದ್ದುಕೊಂಡು ಈ ಕೆಲಸಗಳನ್ನು ಮಾಡಿಸುತ್ತಿದ್ದಾರೆಂದರೆ ತಪ್ಪಾಗಲಾರದು ಇದೇ ರೀತಿ ನಡೆಯುವುದಕ್ಕೆ ಬಿಡುವುದು ಸರಿಯಲ್ಲ. ವಿದ್ಯಾರ್ಥಿಗಳ ಸಾಕಷ್ಟು ಒಂದು ಜವಾಬ್ದಾರಿ ನಮ್ಮ ಮೇಲೆ ಇದ್ದರೂ ಕೂಡಾ ವಿದ್ಯಾರ್ಥಿಗಳ ಅವರ ವಿದ್ಯಾ ಮತ್ತು ಸ್ಥಾನಮಾನಕ್ಕೆ ಸಹಾನುಭೂತಿ ನೀಡಬೇಕು. ವಿದ್ಯಾರ್ಥಿಗಳು ವಿದ್ಯಾರ್ಥಿಗಳಾಗಿಯೇ ಇರುವುದನ್ನು ಬಿಟ್ಟು ಗೂಂಡಾಗಿರಿಗೆ ಇಳಿಯುವುದಾದರೆ ಅದನ್ನು ನಾವು ಖಂಡಿಸಲೇಬೇಕು. ಆ ಪಕ್ಷ ಈ ಪಕ್ಷ ಎನ್ನುವ ಪ್ರಶ್ನೆ ಬರುವುದಿಲ್ಲ ಆದ್ದರಿಂದ ಈ ವಿಷಬೀಜವನ್ನು ಬೆಳೆದುಕೊಂಡು ಹೋಗುವುದಕ್ಕೆ ಬಿಡಬಾರದು ಒಬ್ಬ ಮಹಿಳೆ ಮತ್ತು ಮುಖ್ಯಿರಾದ ವೈಸ್‌ಚಾನ್ಸ್‌ಲರ್ ಮೇಲೆ ಕೈಮಾಡಿದಾಗ ವಿದ್ಯಾರ್ಥಿಗಳಿಂದು ಸಹಾನುಭೂತಿ ತೋರಿಸುವುದು ಸರಿಯಲ್ಲ ಜೊತೆಗೆ ಅಲ್ಲಿ ಪ್ರೇಕ್ಷಕರಾಗಿ ಇದ್ದ ನಾಗರೀಕರು ಈ ಪ್ರಕರಣ ನಡೆಯುತ್ತಿದ್ದರೂ ಸುಮ್ಮನೆ ನೋಡಿಕೊಂಡು ಇದ್ದದ್ದು ಬಹಳ ವಿಷಾದಕರವಾದ ಸಂಗತಿ. ಅವರು ಇದನ್ನು ತಡೆದು ಪರಿಸ್ಥಿತಿಯನ್ನು ಹತೋಟಿಗೆ ತರಬಹುದಾಗಿತ್ತು ಅವರು ತಡೆದಿದ್ದರೆ ಇಷ್ಟು ಪರಿಸ್ಥಿತಿಗೆ ಹೋಗುತ್ತಿರಲಿಲ್ಲವೆಂದು ಹೇಳುತ್ತೇನೆ.

1-30 P.M.

ಈ ಘಟನೆಗಳು ನಡೆಯುತ್ತಿರುವಾಗ ಅಲ್ಲಿ ಪೋಲೀಸ್ ಒಬ್ಬ ಇದ್ದನು. ಅವನು ಏನೂ ಮಾಡಲಿಲ್ಲ. ಪ್ರೇಕ್ಷಕರು ಅನೇಕರು ಅಲ್ಲಿದ್ದರೂ ಅವರೂ ಸಹ ಏನೂ ಮಾಡಲಿಲ್ಲವೆಂದು ಕೇಳಿದ್ದೇನೆ. ಇಂತಹ ದುರ್ಘಟನೆ ನಡೆಯುತ್ತಾ ಇರುವಾಗ ಸಾರ್ವಜನಿಕರು ಅದನ್ನ ಕಣ್ಣಾರೆ ಕಂಡಿದ್ದರೂ ಸಹ ಅದನ್ನು ನೋಡಿಕೊಂಡು ಸುಮ್ಮನೆ ಇರುವುದು ಅವರ ಹೇಡಿತನವನ್ನು ತೋರಿಸುತ್ತದೆ. ಮತ್ತು ಅವರು ''ನಾವು ಯಾವುದೇ ವಿಧದಲ್ಲಿ ದೊಡ್ಡ ಮನುಷ್ಯರು'' ಎಂದು ಹೇಳಿಕೊಳ್ಳುವುದಕ್ಕೂ ಅವರಿಗೆ ಅರ್ಹತೆ ಇಲ್ಲವೆಂದು ನಾನು ಹೇಳುತ್ತೇನೆ. ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಮಾಡತಕ್ಕಂಥ, ದೌರ್ಜನ್ಯ ಮಾಡತಕ್ಕಂಥ ವಿದ್ಯಾರ್ಥಿಗಳನ್ನು ಪುಂಡರು ಎಂದು ಹೇಳಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ಅವರನ್ನು ಯಾವ ವಿಧದಲ್ಲೂ ಸಡಿಲ ಬಿಟ್ಟರೆ ಅವರು ತಲೆಯ ಮೇಲೆ ಕುಳಿತುಕೊಳ್ಳುತ್ತಾರೆ. ಆದ್ದರಿಂದ ಇಂತಹ ಪ್ರಕರಣಕ್ಕೆ ಯಾರು ಮೂಲ ಕಾರಣರು ಎಂಬುದನ್ನು ಕಂಡುಹಿಡಿದು ಅಂತಹವರನ್ನು ಶಿಕ್ಷೆ ಮಾಡತಕ್ಕದ್ದು ನಿಮ್ಮ ಕರ್ತವ್ಯ. ವಿದ್ಯಾರ್ಥಿಗಳು ಏನೇ ಮಾಡಿದರೂ ಅದಕ್ಕೆ ತೇಪೆ ಹಾಕಿ ಸುಮ್ಮನೆ ಕೂಡುವುದರ ಬದಲು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಬಹಳ ಕಷ್ಟಕ್ಕೆ ಬರುತ್ತದೆ. ಮಾನ್ಯಸಭಾಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ತಿಳುವಳಿಕೆ ಕೊಡುವುದು ಏನೆಂದರೆ ಇನು ಮುಂದೆ ಇಂತಹ ವಿಷಯಗಳು ನಡೆಯದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು. ಇಂತಹ ಘಟನೆಗಳನ್ನು ಇನ್ನು ಮುಂದೆ ತಡೆಗಟ್ಟದಿದ್ದರೆ ಖಂಡಿತವಾಗಿಯೂ ಯಾರಿಗೂ ಇದರಿಂದ ಮರ್ಯಾದೆ ಬರುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಘಟನೆಯ ಬಗ್ಗೆ ತೆಗೆದುಕೊಳ್ಳತಕ್ಕ ಕ್ರಮ

ವೇನು? ಹಾಗೂ ಇಂತಹ ದುರ್ಘಟನೆಗಳು ಇನ್ನು ಮುಂದೆ ನಡೆಯದ ರೀತಿಯಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು ಮತ್ತು ಈ ಬಗೆ ಒಂದು ಆಶ್ವಾಸನೆಯನ್ನೂ ಸಹ ಕೊಡಬೇಕೆಂದು ಹೇಳಬಯಸುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Mr. Speaker, Sir, what our Hon. Member Sri Armugum has said is cent percent correct. We Support it and I strongly condemn the attitude of the student world. There must be some limitation for agitations also. They have pulled the hairs of that lady; they have plucked the flowers from her hair and they have pulled her saree. They had no courtesy for that lady, How courageous they are, I don't know whether that lady belongs to Harijan community. She comes from a backward community, But, whatever it is, she is a lady. I strongly condemn this act of the student world. The Police Sub-Inspector, Sri Ramachandran and one Constable were there in that place but they have not done anything to protect that lady from the acts of the students. This incident attaches a stigma on the student world. I therefore request the Government to take proper action. With these words, I once again support the views of my hon. Friend Sri Armugum.

† ಶ್ರೀ ಪಿ. ರಾಮುದೇವ್ (ಮುಲ್ಲೇಶ್ವರಂ). ಸನ್ಮಾನ್ಯ ಅಧ್ಯಕ್ಷರೇ, ನಾನು ಮತ್ತು ಶ್ರೀ ಶ್ರೀನಿವಾಸ್‌ರವರು ಈ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಮೋಷನ್ ಅನ್ನು ಕಳುಹಿಸಿದ್ದೇವೆ. ನಿನ್ನೆಯ ದಿವಸ ಆಗಿರತಕ್ಕಂಥ ದುರ್ಘಟನೆಯನ್ನು ಪ್ರತಿಯೊಬ್ಬರೂ ತೀವ್ರವಾಗಿ ಖಂಡಿಸಬೇಕಾಗಿದೆ. ನಾನು ಸಹ ಅದನ್ನು ಯಾಪ ಒಂದು ರಿಸರ್ವೇಷನ್ ಇಲ್ಲದೇ ಖಂಡಿಸುತ್ತೇನೆ. ನಾನು ಸಹ ಒಂದಾನೊಂದು ಕಾಲದಲ್ಲಿ ಸೆನೆಟ್ ಮೆಂಬರ್ ಆಗಿದ್ದೆನು. ಇಪತ್ತಿನ ದಿವಸ ಈ ಬೆಂಗಳೂರು ಯೂನಿವರ್ಸಿಟಿ ಹುಟ್ಟಿದಾಗಿನಿಂದಲೂ ಇದುವರೆಗೂ ಯಾವ ವರ್ಷವೂ ಅದು ಸರಿಯಾದ, ಒಳ್ಳೆಯ ಯೂನಿವರ್ಸಿಟಿ ಎಂದು ಅಪ್ರಿಸಿಯೇಷನ್ ತೆಗೆದುಕೊಳ್ಳುವ ರೀತಿಯಲ್ಲಿ ನಡೆದುಕೊಂಡಿಲ್ಲ ಎಂದು ಹೇಳಬೇಕಾಗಿದೆ.

SRI K. H. RANGANATH.—We are not concerned with the University affairs now. The aspect is purely a different one. What Mr. Armugam has raised is an incident that has taken place *i.e.*, manhandling the Vice-Chancellor and the Director of collegiate Education, and going to the extent of molestation. We are now not concerned here with h w the University runs, what happens and what is happening and all that. Let not the hon.Member go into those sspects. Let him not take a deviation.

ಶ್ರೀ ಪಿ. ರಾಮುದೇವ್.— ಈಗ ಯೂನಿವರ್ಸಿಟಿ ಆಟಾನಮಸ್ ಬಾಡಿ ಎಂದು ನನಗೆ ಗೊತ್ತಿದೆ. ಅದಕ್ಕೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.— ಅದು ಆಟಾನಮಸ್ ಬಾಡಿ ಎಂದು ಗೊತ್ತಿದೆ. ಅದಕ್ಕೆ ಹಣವನ್ನೂ ಕೊಡುತ್ತಿದ್ದೇವೆ.....

(ಈ ಸಂದರ್ಭದಲ್ಲಿ ಶ್ರೀ ಬಿ. ಶಿವಣ್ಣ ಮತ್ತು ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡಲು ಪ್ರಾರಂಭ ಮಾಡಿದರು)

SRI B. SHIVANNA.—Who are those culprits?

MR. SPEAKER.—If the hon. Member wants to speak, I will permit him.

ಶ್ರೀ ಪಿ. ರಾಮದೇವ್.—We also condemn that incident. ಈಗ ಈ ದುರ್ಘಟನೆಯ ಹಿನ್ನೆಲೆಯಲ್ಲಿ ತಮ್ಮನ್ನು ಕೇಳುತ್ತಾ ಇರುವುದು ಏನೆಂದರೆ ಇದರ ಬಗ್ಗೆ ತಾವು ತೀವ್ರವಾಗಿ ವಿಚಾರ ಮಾಡಬೇಕು ಹಾಗೂ ಎನ್‌ಕ್ವೈರಿ ಮಾಡಬೇಕು. ಪದೇ ಪದೇ ಇಂತಹ ದುರ್ಘಟನೆಗಳು ಆಗುತ್ತಿರುವುದರಿಂದ ಯೂನಿವರ್ಸಿಟಿಗೆ ಕೆಟ್ಟ ಹೆಸರು ಬರುತ್ತಾ ಇದೆ, ಒಳ್ಳೆಯ ಫಲಿತಾಂಶ ಬರುತ್ತಾ ಇಲ್ಲ. ಬೆಂಗಳೂರು ಯೂನಿವರ್ಸಿಟಿ ಮಾಲ್‌ಪ್ರಾಕ್ಟೀಸ್ ಯೂನಿವರ್ಸಿಟಿ ಎಂದು ಕೆಟ್ಟ ಹೆಸರು ಬರುತ್ತಾ ಇದೆ. ಈ ದುರ್ಘಟನೆಯಿಂದ ಪೋಷಕರಿಗೆ ಕಳವಳ ಉಂಟಾಗಿದೆ. ಈ ಬಗ್ಗೆ ಎನ್‌ಕ್ವೈರಿ ಮಾಡಿ ಇದಕ್ಕೆ ಸಂಬಂಧಪಟ್ಟ ಹಾಗೆ ಯಾರ್ಯಾರು ಜವಾಬ್ದಾರರು ಎಂಬುದನ್ನು ಕಂಡುಹಿಡಿಯಬೇಕು. ಸಿಂಡಿಕೇಟ್ ನವರು ಯಾವಾಗ ಟೆಕ್ನಿಕಲ್ ಎಕ್ಸ್‌ಪರ್ಟ್ ಕಮಿಟಿಯ ವಿರುದ್ಧವಾಗಿ ತೀರ್ಮಾನ ತೆಗೆದುಕೊಂಡರೋ ಆಮೇಲೆ ಅದಕ್ಕೆ ರಿವರ್ಸ್ ಮಾಡಿದರೋ, ಅವರೇ ಇದಕ್ಕೆ ಜವಾಬ್ದಾರರು ಎಂದು ನಾನು ಹೇಳುತ್ತೇನೆ. ಇದನ್ನು ಎನ್‌ಕ್ವೈರಿ ಮಾಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಈ ಸಭೆಯ ಮುಂದೆ ಎತ್ತಿಶತಕ್ಕಂಥ ವಿಷಯ ಬೇರೆ, ನೀವು ಪ್ರಸ್ತಾಪ ಮಾಡುತ್ತಾ ಇರತಕ್ಕಂಥ ವಿಷಯ ಬೇರೆ. ಪೋಲೀಸಿನವರು ಲಾ ಅಂಡ್ ಆರ್ಡರ್ ಪ್ರಕಾರ ಪ್ರಿವೆಂಟಿವ್ ಮೆಜರ್ಸ್ ತೆಗೆದುಕೊಳ್ಳಬೇಕಾಗಿತ್ತು. ಆದರೆ How are we concerned about all those things? Let us not discuss those aspects. The relevant aspect that has been raised in the House is a different one. Let him confine himself to that aspect only.

ಶ್ರೀ ಪಿ. ರಾಮದೇವ್.—ಆ ಹಿನ್ನೆಲೆಯಲ್ಲೇ ನಾನು ಹೇಳುತ್ತಾ ಇರುವುದು, ದಯವಿಟ್ಟು ಬೆಂಗಳೂರು ಯೂನಿವರ್ಸಿಟಿಯ ಗೌರವವನ್ನು ಕಾಪಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರಿಗೆ ಆ ಶಕ್ತಿ ಇದೆ, ಅದನ್ನು ಮಾಡಬೇಕು ಎಂದು ಹೇಳುತ್ತಿದ್ದೇನೆ.

†ಶ್ರೀ ಬಿ. ಶಿವಣ್ಣ (ದೇವದುರ್ಗ).—ಮಾನ್ಯ ಅಧ್ಯಕ್ಷರೇ. ಈ ಹರಿಜನರು ಗಿರಿಜನರು ಈ ದೇಶದಲ್ಲಿ ೨೫-೩೦ ವರ್ಷಗಳಿಂದಲೂ ನಾನಾತರಹದ ಕಷ್ಟಗಳಿಂದ ಪಾರಾಗಿ ಬರುತ್ತಾ ಇರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಭಾರತದೇಶಕ್ಕೆ ಮಹಾತ್ಮ ಗಾಂಧೀಜಿಯವರು ಹಾಗೂ ಪಂಡಿತ್ ಜವಹರಲಾಲ್ ನೆಹರೂರವರು ಇನ್ನು ಳಿದ ಮಹಾ ನಾಯಕರಿಂದ ಸ್ವಾತಂತ್ರ್ಯ ಸಿಕ್ಕಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಹರಿಜನ-ಗಿರಿಜನರನ್ನು ಪ್ರಾಣಿಗಳು ಆಥವಾ ವಸ್ತುಗಳ ರೂಪದಲ್ಲಿ ಕಾಣುತ್ತಾ ಬಂದಿದ್ದಾರೆ. The Harijans were saleable like property. They were treated like slaves in this country. We tolerated all these things ಇಂತಹ ದೇಶದಲ್ಲಿ ಹರಿಜನರನ್ನು ಸ್ಲೇವ್ಸ್ ಎಂದು ಕಾಣುತ್ತಿದ್ದಂತಹ ಕಾಲದಲ್ಲಿ ಡಾ॥ ಅಂಬೇಡ್ಕರ್‌ರವರು ಹುಟ್ಟಿದರು ಅವರು ಇದನ್ನು ತಡೆಗಟ್ಟುವುದಕ್ಕಾಗಿ ಪೂನಾದಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು. ನಮಗೆ ನೆನಪು ಬರುತ್ತಾ ಇದೆ ಅವರು ಏನು ಹೇಳಿದರು ಎಂದರೆ ಹರಿಜನರೂ ಸಹ ಹಿಂದೂಗಳಲ್ಲಿ ಒಂದು ಪಂಗಡ ಎಂದು ಹೇಳಿದರು.

ಆಗ ದೇಶವನ್ನು ಉಳಿಸಬೇಕಾಗಿತ್ತು ಇಲ್ಲ ಎಂದರೆ, ಈ ದೇಶ ಇನ್ನೊಂದು ಪಾಕಿಸ್ತಾನವಾಗುತ್ತಿತ್ತು ಅಂದರೆ, ಏನು ಅರ್ಥ? ಹರಿಜನರು ನಮ್ಮ ಸಲುವಾಗಿ ಸೇವೆ ಮಾಡಬೇಕು, ನಮ್ಮ ಸಲುವಾಗಿ ದುಡಿಯ ಬೇಕು ಎಂದು. ಹರಿಜನರು ಪೇಲ್ವರ್ಗದವರ ಸೇವೆ ಮಾಡಬೇಕೇನು? ಸಹಿ ಮಾಡುವಾಗ ಅಂಬೇಡ ರ್ ಅವರ ಕಣ್ಣಿನಲ್ಲಿ ನೀರ ಬಂತು. ಅವರು ಸಹಿ ಮಾಡುತ್ತಾ ಹೇಳಿದರು, ನಾನು ನನ್ನ ರಕ್ತದಿಂದ ಇದಕ್ಕೆ ಸಹಿ ಮಾಡುತ್ತಿದ್ದೇನೆ ಎಂದು ಅವರು ಅಂದು ಸಹಿ ಮಾಡಿರದಿದ್ದರೆ. ಇಂದು ಇಂಥಾ ಪ್ರಕರಣಗಳು ಆಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಇಂದು ನಮ್ಮ ಹೆಸರನ್ನೇಳಿಕೊಂಡು ದೇಶ ನಡೆಸುತ್ತಿದ್ದಾರೆ. ಪ್ರತಿಯೊಬ್ಬರೂ ಹರಿಜನರ ಜಹಗೀರು ಹೇಳಿಕೊಂಡು ಅಧಿಕಾರ ನಡೆಸುತ್ತಿದ್ದಾರೆ ಅಂದರೆ ಇಂದು ಹರಿಜನರಿಗೆ ಒಂದು ಹೊತ್ತಿಗೆ ಊಟವಿಲ್ಲ, ಅವರು ಕೂಲಿ ಮಾಡಬೇಕು, ಅವರು ತಿನ್ನ ಬೇಕು. ಹಾಗಾದರೆ ಎಂಥಾ ಸರ್ಕಾರ ಇದು? ಯಾರದು ಸರ್ಕಾರ ಇದು? What is democracy? Is it people's democracy? What is people's democracy? What is voting?

.....ಚುನಾವಣೆಯಲ್ಲಿ ಯಾರ್ಯಾರು ಏನೇನು ಮಾಡುತ್ತಾರೆ ಅಂತ ಗೊತ್ತಿಲ್ಲವೇ? ಹರಿಜನರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬರುತ್ತಿದ್ದಾರೆ. ಚುನಾವಣೆ ಕಾಲದಲ್ಲಿ ಹರಿಜನರನ್ನು ಉದ್ಧಾರ ಮಾಡ್ತೀವಿ ಅಂಥಾ ಹೇಳ್ತಾರೆ. ಆದರೆ, ಇಂದು ಹರಿಜನರ ಸ್ಥಿತಿ ಏನಾಗಿದೆ? ಉತ್ತಮ ಕಾಲದವರು ಹೋಗುವ ಸ್ಕೂಲಿಗೆ ಇವರು ಹೋಗಬಾರದು, ಅವರು ಉಪಯೋಗಿಸುವ ಬಾವಿ ನೀರನ್ನು ಇವರು ಉಪಯೋಗಿಸಬಾರದು, ದೇವಸ್ಥಾನಗಳಿಗೆ ಹರಿಜನರು ಹೋಗಬಾರದು. ಇದೆಲ್ಲಾ ಇನ್ನೆಷ್ಟು ದಿವಸ ನಡೆಯುತ್ತದೆ. ಇಂದು ಹರಿಜನ ಜಾತಿಗೆ ಸೇರಿದ ಹೆಂಗಸಿನ ಮೇಲೆ ಅತ್ಯಾಚಾರದ ಬಗ್ಗೆ ಕೇಳಿದರೆ, ಯೂನಿವರ್ಸಿಟಿ ಅಟಾನಮಸ್ ಬಾಡಿ ಅಂತಾ ಹೇಳ್ತಾರೆ. ಯಾವುದು ಅಟಾನಮಸ್? ಯಾವುದು ಅಟಾನಮಿ? ಇಂದು ವಿಶ್ವವಿದ್ಯಾನಿಲಯಕ್ಕೆ ಉಸಿರಿಲ್ಲ, ವಿಶ್ವವಿದ್ಯಾನಿಲಯದಿಂದ ಹರಿಜನರಿಗೆ ಯಾವ ಪ್ರಯೋಜನವೂ ಇಲ್ಲ, ಲಾಭವೂ ಇಲ್ಲ. ಹರಿಜನರು ಇಂದು ದುಡಿಯಬೇಕು, ಅವರು ಊಟ ಮಾಡಬೇಕು ಈ ಪ್ರಕಾರ ಹರಿಜನರ ಮೇಲೆ ಅತ್ಯಾಚಾರ ಮಾಡುವುದಾದರೆ ಅವರು ಬದುಕುವುದಾದರೂ ಹೇಗೆ? ಅಂದು ಅಂಬೇಡ ರ್ ಅವರು ಹೇಳಿದರು. ''ನಿಮ್ಮ ಗಾಂಧೀಜಿಗೆ ಹೇಳಿ, ನಾನು ಹಿಂದೂ ಆಲ್ಲ ಎಂದು'' ಅಂತ ಆದರೆ, ಈ ದೇಶದ ನಾಯಕರು ಅಂದು ಮೋಸ ಮಾಡಿದರು ಹರಿಜನರನ್ನೆಲ್ಲ ಕಾಂಗ್ರೆಸ್ಸಿಗೆ ಹಾಕಿ ಬಿಟ್ಟರು. ಅಂದೇ ಅಂಬೇಡ ರ್‌ರವರು ''ನಾನು ಸಾಯುವಾಗ ಹಿಂದೂ ಆಗಿ ಸಾಯುವುದಿಲ್ಲ'' ಎಂದು ಹೇಳಿದರು. ಅಂತೆಯೇ ಅವರು ಬೌದ್ಧ ಮತಕ್ಕೆ ಸೇರಿದರು. ಹರಿಜನರ ಉದ್ಧಾರವನ್ನು ಗಾಂಧಿ ಮಾಡಲಿಲ್ಲ, ಬುದ್ಧ ಮಾಡಲಿಲ್ಲ, ದೇವರು ಮಾಡಲಿಲ್ಲ. ನಾವು ದೇವರನ್ನೂ ನೋಡಿಲ್ಲ. ನಾವು ಇಂದು ಇ ಕುಳಿತಿರುವುದೆಲ್ಲಾ ಅಂಬೇಡ್ಕರ್‌ರವರ ಪ್ರಯತ್ನದಿಂದ ಅವರು ಹರಿಜನರಿಗೆ ರಾಜ್ಯಾಂಗದಲ್ಲಿ ಸ್ಥಾನ ಗಳನ್ನು ಮೀಸಲಿಟ್ಟರು. ಅವರು ರಾಜ್ಯಾಂಗದಲ್ಲಿ ಸ್ಥಾನಗಳನ್ನು ಮೀಸಲಿಟ್ಟಿದ್ದರಿಂದ ನಾವು ಇಲ್ಲಿಗೆ ಬಂದಿದ್ದೇವೆ. ಆಗಲೂ ಜವಹರಲಾಲ್ ನೆಹರೂ ಅವರು ಇದ್ದರು, ಗಾಂಧೀಜಿಯವರು ಇದ್ದರು, ಅವರೆಲ್ಲ ಇದ್ದರೂ ಏನಾಯಿತು? ಕಾನ್‌ಸ್ಟಿಟ್ಯೂಷನ್ ಕತ್ತೆ ಕಾಯುವುದಕ್ಕಿದೆಯೆ? ಸರ್ಕಾರ ಇದೆಯೆ? ವಿಶ್ವವಿದ್ಯಾನಿಲಯದ ಒಬ್ಬ ಉಪಕುಲಪತಿಗೆ ಕಲ್ಲು ಹೊಡೆಯುವುದು, ಹೆಣ್ಣು ಮಗಳ ಮಾನಭಂಗ ಮಾಡುವುದೂ ಒಂದು ಸಂಸ್ಕೃತಿಯೆ? ಚರ್ಚಿಲ್ ಅವರು ಒಂದು ಕಡೆ ಭಾರತೀಯರನ್ನು ಕುರಿತು ''ಭಾರತೀಯರು ಮೂರ್ಖರು ಅಪ್ರಯೋಜಕರು'' ಎಂದು ಹೇಳಿದ್ದಾರೆ. ಚರ್ಚಿಲ್ ಅವರ ಮಾತನ್ನು ಇಂದು ನಾನು ನೆನಪು ಮಾಡಿಕೊಡಬಯಸುತ್ತೇನೆ. ನಾವು ಸ್ವಾತಂತ್ರ್ಯ ಗಳಿಸಿದ ಹಿಂದಿನ ದಿನಗಳನ್ನು ನೋಡಬೇಕು, ಸಿಪಾಯಿ ದಂಗೆ ಪ್ರಕರಣಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು. ಬ್ರಿಟಿಷರು ನಮ್ಮನ್ನು ಸುಮಾರು ಎರಡು ನೂರು ವರ್ಷಗಳ ಕಾಲ ಆಳಿದರು, ಅದಕ್ಕೂ ಮುಂಚೆ ಮೊಗಲರು ನಮ್ಮನ್ನು ಆಳಿದರು. ನಾವು ಅಂದಿನಿಂದಲೂ ಗುಲಾಮರೇ. ಇಂದು ಗುಲಾಮರೇ. ಇಂದಿನ ಗುಲಾಮರಲ್ಲಿ ನಾವು ಸ್ವಲ್ಪ ಕೆಳಗಿನ ಗುಲಾಮರು. ಮುಂದುವರಿದ ವರ್ಗದವರು ಸ್ವಲ್ಪ ಮೇಲ್ಮಟ್ಟದ ಗುಲಾಮರು ಅಷ್ಟೆ. ಹರಿಜನರು ಅಂದರೆ ಕತ್ತೆಯೋ. ನಾಯಿಯೋ, ಒಂದು ಪ್ರಾಣಿಯೋ, ಪಶುವೊ? ಹರಿಜನರಿಗೇನೂ ಮರ್ಯಾದೆ ಇಲ್ಲವೇ? ದೇವರು ಗೀವರು, ಊಟ ಬಟ್ಟೆ, ಗುಡಿ ಗೋಪುರ ಜಹಗೀರು ಅವರಿಗೇನೂ ಬೇಡವೆ? ಇದು ಎಂಥಾ ಪ್ರಜಾಪ್ರಭುತ್ವ? ಯಾರ ಸಲುವಾಗಿದೆ ಈ ಪ್ರಜಾಪ್ರಭುತ್ವ? ಕಳೆದ ಮೂವತ್ತು ವರ್ಷಗಳಿಂದಲೂ ಮೇಲ್ವರ್ಗದವರೇ ರಾಜ್ಯಭಾರ ಮಾಡುತ್ತಿದ್ದಾರೆ ನಾವೇನಿದ್ದರೂ, ಕರೆದಾಗ ಹೋಗಿ ಅವರು ತೋರಿಸಿದ ಕಡೆ ರುಜು ಹಾಕಬೇಕು ಅಷ್ಟೆ. ಮೂವತ್ತು ವರ್ಷಗಳಿಂದಲೂ ಇಲ್ಲಿ ಸರ್ಕಾರ ಇದೆ, ಮಂತ್ರಿಗಳೂ ಇದ್ದಾರೆ, ರಾಜಧಾನಿಯೂ ಇದೆ. ಆದರೆ, ಹರಿಜನ ಹೆಣ್ಣು ಮಗಳೊಬ್ಬಳು ತನ್ನ ಅರ್ಹತೆಯ ಮೇಲೆ ಯೂನಿವರ್ಸಿಟಿ ಶಿಕ್ಷಣದ ನಿರ್ದೇಶಕಳಾದರೆ, ಅವಳ ಮೇಲೆ ಅತ್ಯಾಚಾರ ಮಾಡಿದರೆ, ಇಂದು ಹರಿಜನರು ಇರಬೇಕೋ ಬೇಡವೊ? ಇನ್ನು ಮುಂದೆ ಹೀಗೆ ಆದದ್ದೇ ಆದರೆ, ನಾವೆಲ್ಲಾ ಹರಿಜನ ಶಾಸಕರು ಪಕ್ಷಗಳನ್ನು ಬಹಿಷ್ಕರಿಸುತ್ತೇವೆ, ನಮಗೆ ಜನತಾ ಪಕ್ಷವೂ ಬೇಡ, ಕಾಂಗ್ರೆಸ್ ಪಕ್ಷವೂ ಬೇಡ, ನಮಗೆ ಯಾವ ಸರ್ಕಾರವೂ ಬೇಡ. ಈ ಮೂಲಕ ನಾನು ಜನತೆಗೂ ಸರ್ಕಾರಕೂ ಎಚ್ಚರಿಕೆ ಕೊಡಬಯಸುತ್ತೇನೆ. Government should come to the rescue. The concerned Minister or the Government should say what is the action taken or proposed to take and intimate the same to this House before this evening Otherwise, there will be a difficult situation. I am not condemning any party or person or caste. It is the question of democracy and socialism.

ಶಾಸನ ಸಭೆಗಳಲ್ಲಿ ಮುಖಂಡರುಗಳು ಭಾಷಣ ಮಾಡುವುದನ್ನು ನಾನು ಕೇಳಿದ್ದೇನೆ. ಸನ್ಮಾನ್ಯ ಸಭಾಪತಿಗಳೇ, ಹರಿಜನರಿಗೆ ಈ ಪ್ರಕಾರವಾಗಿ ಅನ್ಯಾಯವಾಗಬಾರದು ಎಂದು ಹೇಳುತ್ತಾರೆ. ಕೊನೆಗೆ ಹರಿಜನರಿಗೆ ಹತ್ತು ಹತ್ತು ರೂಪಾಯಿ ಕೊಟ್ಟುಬಿಟ್ಟು ಓಟು ಹಾಕು ಎಂದು ಹೇಳ್ತಾರೆ. ಏನು ಶಾಸನ ಸಭೆ, ಏನು ಚುನಾವಣೆ? ನನ್ನ ಮೇಲೆ ಕೃತ್ಯವೆಸಗಲಿ, ನಾನು ಜೈಲಿಗೆ ಹೋಗುವುದಕ್ಕೂ ತಯಾರಾಗಿದ್ದೇನೆ ನನ್ನ ಮೇಲೆ ಎಲ್ಲರೂ ಅನ್ಯಾಯ ಮಾಡುತ್ತಾರೆ. ನಮ್ಮವರೂ ಮಾಡುತ್ತಾರೆ, ಒಳಗಡೆ ಇರುವವರೂ ಮಾಡುತ್ತಾರೆ, ಹೊರಗಡೆ ಇರುವವರೂ ಮಾಡುತ್ತಾರೆ, ಆದ್ದರಿಂದ ನಾವು ಹಿಂದೂಗಳಲ್ಲ ಎಂದು ಘೋಷಣೆ ಮಾಡುವ ದಿನವೂ ಬರುತ್ತದೆ. ಮಾನ್ಯ ರಂಗನಾಥ ಅವರೂ ಇಲ್ಲಿ ಇದ್ದಾರೆ, ಮಾನ್ಯ ಬಸವಲಿಂಗಪ್ಪನವರೂ ಇಲ್ಲಿ ಇದ್ದಾರೆ. ಇಂದು ದೇಶದಲ್ಲಿ ಹರಿಜನರ ರಕ್ಷಣೆ ಆಗಬೇಕಾಗಿದೆ. ಇಲ್ಲದಿದ್ದರೆ, ಅಂದು ಅಂಬೇಡ್ಕರ್ ಅನುಸರಿಸಿದ ಮಾರ್ಗವನ್ನೇ ಇಂದು ನಾವೆಲ್ಲ ಅನುಸರಿಸಬೇಕಾಗುತ್ತದೆ. ನಮಗೇನು ಸ್ಥಾನಮಾನಗಳು ಬೇಕಾಗಿಲ್ಲ, ಅಧಿಕಾರ ಬೇಕಾಗಿಲ್ಲ, ನಾವು ಜನರ ಹಿತರಕ್ಷಣೆ ಮಾಡಬೇಕಾಗಿದೆ ಇಂದು ಯಾರೋ ದೊಂಬಿ ಮಾಡುವುದು ನಮ್ಮ ಹರಿಜನರ ಮೇಲೆ ಹಾಕುವುದು ಈ ರೀತಿಯೆಲ್ಲಾ ನಡೆಯುತ್ತಿದೆ, ಇದನ್ನೆಲ್ಲಾ ಸರ್ಕಾರದವರು ಕೂಡಲೇ ತಡೆಗಟ್ಟಬೇಕು. ನಿನ್ನೆ ನಡೆದ ಹರಿಜನ ಮಹಿಳೆಯೊಬ್ಬಳ ಮೇಲೆ ನಡೆದ ಹಲ್ಲೆ ಬಗ್ಗೆ ಇಂದಿನ ಸಂಜೆಯೊಳಗೆ ಸರ್ಕಾರದವರು ಕ್ರಮ ತೆಗೆದು ಕೊಳ್ಳಬೇಕು. ಈ ಘಟನೆಯಲ್ಲಿ ಯಾರು ಯಾರು ಷಾಮೀಲಾಗಿದ್ದಾರೆ, ಯಾರು ಯಾರು ಈ ಘಟನೆಗೆ ಪ್ರಚೋದಕರಾಗಿದ್ದಾರೆ ಎನ್ನುವುದನ್ನೆಲ್ಲಾ ಹೊರಗೆಡಹಬೇಕು. ಇನ್ನು ಮುಂದೆ ಹರಿಜನರ ಮೇಲೆ ನಡೆಯುವ ಹಲ್ಲೆಗಳನ್ನು ಸರ್ಕಾರದವರು ತಪ್ಪಿಸಬೇಕು, ಇಲ್ಲದಿದ್ದರೆ, ಹರಿಜನರ ಶಾಸಕರು ಇಲ್ಲಿ ಕುಳಿತು ಕೊಳ್ಳುವ ಪ್ರಸಂಗ ಬರುವುದಿಲ್ಲವೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಕೆ. ತೆಕೆಡ್ (ಪರಸಗಾಡ್).—ಮಾನ್ಯ ಅಧ್ಯಕ್ಷರೇ, ವಿದ್ಯಾ ಮಂದಿರದಲ್ಲಿ ಒಬ್ಬ ಪೂಜ್ಯ ಸ್ತ್ರೀ ಶೀಲಹರಣ ಮಾಡುವುದಕ್ಕೆ ಯಾರು ಪ್ರಚೋದನೆ ಮಾಡಿದರು ಏನ್ನುವುದನ್ನು ನಾವು ಮೊದಲು ವಿಚಾರ ಮಾಡಬೇಕಾಗುತ್ತದೆ. ಸಾಪವಾನ್ಯವಾಗಿ ನಾನು ಹೇಳುವುದಾದರೆ, ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಈ ರಾಜ್ಯದಲ್ಲಿ ಕಾಂಗ್ರೆಸ್ಸಿಗರಂತೂ ಪ್ರಚೋದನ ಕಾರ್ಯವನ್ನು ಮಾಡಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತೇನೆ. ಈಗಾಗಲೇ ಸಂಸದೀಯ ವ್ಯವಹಾರಗಳ ಸಚಿವರು ಈ ವಿಚಾರದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ನಿನ್ನೆ ಬೆಂಗಳೂರು ವಿಶ್ವವಿದ್ಯಾನಿಲಯದ ಬಳಿ ಮಹಿಳೆಯೊಬ್ಬಳ ಮೇಲೆ ನಡೆದ ಹಲ್ಲೆ ವಿಚಾರ ಈಗ ಸಭೆಯ ಮುಂದಿರುವುದು. ಈ ಹಲ್ಲೆಗೆ ಪ್ರಚೋದನೆಯನ್ನು ಯಾವ ಪಕ್ಷದವರೇ ಮಾಡಿರಲಿ, ಅಥವಾ ಪಕ್ಷಗಳಿಗೆ ಸಂಬಂಧಪಡದೆ ಇರುವವರೂ ಮಾಡಿರಲಿ, ಇದೊಂದು ಖಂಡನೀಯವಾದ ಘಟನೆ. ಈ ಹಲ್ಲೆಗೆ ಕಾರಣರಾದ ಪ್ರಚೋದಕರನ್ನು ಕಂಡುಹಿಡಿದು ಅವರಿಗೆ ತಕ್ಕ ಶಿಕ್ಷೆ ಆಗಬೇಕು. ಇದು ಪಕ್ಷಾತೀತವಾದ ಪ್ರಶ್ನೆ, ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಇದು ಒಬ್ಬ ಮಹಿಳೆಯ ಮರ್ಯಾದೆ ಪ್ರಶ್ನೆ, ಆಕೆಯ ಶೀಲದ ಪ್ರಶ್ನೆ ಮಾನ್ಯ ಬಿ. ಶಿವಣ್ಣನವರು ಹೇಳಿದ ವಿಚಾರಗಳನ್ನು ಸರ್ಕಾರ ಗಮನಿಸ ಬೇಕು ಅರ್ಥ ಮಾಡಿಕೊಳ್ಳಬೇಕು, ಉಚ್ಚವರ್ಗಕ್ಕೆ ಸಂಬಂಧಪಟ್ಟವರಾದ ನಾವು ತಿಳಿದುಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಇವತ್ತು ಹರಿಜನ ಗಿರಿಜನರ ಶೋಭೆಗೆ ಕಾರಣ ಏನು ಏನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ ಅನಾವಶ್ಯಕವಾಗಿ ಅಪಸ್ವರ ಎತ್ತಿ ಪಕ್ಷದ ಹೆಸರನ್ನು ತರಕೂಡದು ಎಂದು ನಾನು ಸವಿನಯವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ, ಇದು ಪಕ್ಷದ ಹೆಸರನ್ನು ತರತಕ್ಕ ಪ್ರಶ್ನೆಯಲ್ಲ, ಅಪಸ್ವರವಲ್ಲ. ಯಾವ ಮನುಷ್ಯನೇ ಆಗಲೀ, ತನ್ನ ಮನೆಯ ತಾಯಿಯ ಮತ್ತು ಅಕ್ಕ ತಂಗಿಯರ ಮಾನವನ್ನು ಉಳಿಸಲಿಕ್ಕೆ ಯಾವ ರೀತಿಯಿಂದ ಸರ್ವತ್ಯಾಗ ಮಾಡುವುದಕ್ಕೆ ತಯಾರಾಗುತ್ತಾನೆಯೋ ಆದೇ ರೀತಿ ಅವರ ಮಾನ ಮರ್ಯಾದೆಯನ್ನು ಉಳಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಅದೇ ಒಂದು ತೇಜಸ್ಸಿನಿಂದ, ಗೌರವದಿಂದ, ಉಜ್ವಲದಿಂದ ಇವರ ಮರ್ಯಾದೆಯನ್ನು ನಾವು ಕಾಣಬೇಕು. ಈ ಸಭೆಯಲ್ಲಿ ನಿನ್ನೆ ನಡೆದಂಥ ಘಟನೆಯ ಬಗ್ಗೆ ಮಾನ್ಯ ರಾಮದೇವ್ ಮತ್ತು ಮಳ್ಳೂರು ಆನಂದರಾವ್ ಅವರು ಮಾತನಾಡುತ್ತಾ ಸಿಂಡಿಕೇಟ್‌ನವರು ಏನು ಒಂದು ನಿರ್ಣಯ

ಮಾಡಿದ್ದಾರೆ ಅದು ತಪ್ಪು, ಅದನ್ನು ಬದಲಾವಣೆ ಮಾಡಿರಿ, ಇಲ್ಲದೇ ಹೋದರೆ ಆಲ್ಲಿ ಗಂಭೀರವಾದಂಥ ಘಟನೆಗೆ ಕಾರಣವಾಗುತ್ತದೆ ಎಂದು ಹೇಳುತ್ತಿದ್ದರು. ಅದೇ ವೇಳೆಯಲ್ಲಿ ಈ ಘಟನೆ ನಡೆಯುತ್ತಿತ್ತೆಂದು ಕಾಣಿಸುತ್ತದೆ.

ಸಾಮಾನ್ಯವಾಗಿ ಇವತ್ತು ನಾವು ಯಾವ ರೀತಿಯ ಎಜಿಟೇಷನ್ ಮಾಡುವಾಗ ವಿರೋಧಪಕ್ಷದವರಾಗಲೀ, ಯಾರೇ ಆಗಲೀ, ಸರಿಯಾದಂಥ ರೀತಿಯಿಂದ, ಘಟನಾತ್ಮಕವಾದಂಥ ರೀತಿಯಿಂದ, ಕಾನೂನುಬದ್ಧವಾದ ರೀತಿಯಿಂದ ಸಾಮಾಜಿಕ ನೀತಿಗ ಒಳಪಟ್ಟು ಚಳುವಳಿಯನ್ನು ಮಾಡಬೇಕೇ ಹೊರತು, ಇಂಥ ವಿಧ್ವಂಸಕ ಕೃತ್ಯಗಳಿಗೆ ಆದರಲ್ಲಿಯೂ ಸಮಾಜದ ದುರ್ಬಲ ವರ್ಗಕ್ಕೆ ಸೇರಿದ, ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾವಂತೆಯಾದ ಶ್ರೀಮತಿ ಸೆಲ್ವಿದಾಸ್ ಅವರ ಮೇಲೆ ಅತ್ಯಂತ ಅಪಮಾನ ಮಾಡುವ ರೀತಿಯಲ್ಲಿ ವಿದ್ಯಾರ್ಥಿಗಳು ವರ್ತನೆ ಮಾಡಿರುವುದನ್ನು ಕರ್ನಾಟಕದ ಯಾವ ವ್ಯಕ್ತಿಯೇ ಆಗಲೀ, ಖಂಡಿಸದೇ ಇರಲಾರರು ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ತಾಯಿಗೆ ಅವಮಾನವಾದಾಗ ಯಾವ ರೀತಿಯಿಂದ ಎಷ್ಟು ದುಃಖದಿಂದ, ಎಷ್ಟು ಅನುಕಂಪದಿಂದ ಎಷ್ಟು ತಳಮಳದಿಂದ ಕಾಣುತ್ತೇವೆಯೋ ಅದೇ ರೀತಿಯಿಂದ ಇವತ್ತು ನಾವು ಶ್ರೀಮತಿ ಸೆಲ್ವಿದಾಸ್ ಅವರ ಮೇಲೆ ತೋರಿಸಬೇಕಾಗಿದೆ. ಶ್ರೀಮತಿಯವರ ಮಾನಭಂಗ ಮತ್ತು ಅವಮರ್ಯಾದೆ ಮಾಡುವುದಕ್ಕೆ ಹೊರಟು, ಅವರು ಮುಂದಿದ ಹೂವನ್ನು ಎಳೆದು ಅತ್ಯಾಚಾರ ಮಾಡಿರುವಾಗ ಎಲ್ಲರೂ ಇದನ್ನು ಖಂಡನೆ ಮಾಡಲೇಬೇಕು. ನಿನ್ನೆ ಸಭೆಯಲ್ಲಿ ಶ್ರೀಮಾನ್ ರಾಮದೇವ್ ಅವರು ಮತ್ತು ಮಳ್ಳೂರು ಆನಂದರಾವ್‌ಅವರು ಮಾತನಾಡುತ್ತಿದ್ದಾಗ ಒಂದು ಗಂಭೀರ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಇದು ಸರಿಯಾದುದಲ್ಲ ಎಂದು ಹೇಳಿದರು. ಈಗ ನಾವು ಇಂಥ ಒಂದು ಪರಿಸ್ಥಿತಿಯನ್ನು ಕಂಡೂ ಮಾಡಬೇಕು. ಸರ್ಕಾರದವರೂ ಕೂಡ ಹರಿಜನರ ಮೇಲೆ ಆದಂಥ ಹಲ್ಲೆಯನ್ನು ಖಂಡಿಸಲೇಬೇಕು. ಇದು ಅತ್ಯಂತ ಹೇಯವಾದುದು. ಇದು ಯೂನಿವರ್ಸಿಟಿಯಲ್ಲಿ ಆಗಲೀ, ಹೊರಗಡೆಯಾಗಲೀ ಅಥವಾ ಕರ್ನಾಟಕ ದೇಶದಲ್ಲಿ ಎಲ್ಲಿಯೇ ಆಗಲೀ ಆದರೆ ಇದನ್ನು ತೀವ್ರವಾಗಿ ಖಂಡಿಸಲೇಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯದಲ್ಲಿ ನಾವು ಯಾವುದೇ ಭಿನ್ನಾಭಿಪ್ರಾಯವನ್ನು ಹೊಂದಿಲ್ಲ, ನಮ್ಮ ಬಗ್ಗೆ ಯಾವ ರೀತಿಯ ಸಂಶಯವನ್ನು ತೆಗೆದುಕೊಳ್ಳಬಾರದು ಎಂದು ಹೇಳಿದರು. ಸಭೆಯ ಸದಸ್ಯರೆಲ್ಲರೂ ಒಮ್ಮತದಿಂದ ಈ ವಿಧ್ವಂಸಕ ಘಟನೆಯನ್ನು ಖಂಡಿಸಲೇಬೇಕು ಎಂದು ನಾನು ಹೇಳುತ್ತಿದ್ದೇನೆ. ಮತ್ತು ಇಂಥ ಘಟನೆಗಳು ಮುಂದೆ ಪುನರಾವರ್ತನೆಯಾಗಬಾರದು. ಇದು ಹರಿಜನರ ಮೇಲೆಯಾಗಲೀ, ಅಥವಾ ಯಾವುದೇ ಸ್ತ್ರೀಯ ಮೇಲಾಗಲೀ, ಆದೂ ಕೂಡ ವಿದ್ಯಾಮಂದಿರದಲ್ಲಿ ನಡೆದಾಗ, ಇದಕ್ಕೆ ಯಾರು ಹೊಣೆ ಎನ್ನುವುದನ್ನು ಸರ್ಕಾರದವರು ಪತ್ತೆ ಹಚ್ಚಿ ಯೋಗ್ಯ ಶಿಕ್ಷೆ ಮಾಡುವಂಥ ಕ್ರಮ ಕೈಗೊಳ್ಳಬೇಕು. ಇಂಥ ಘಟನೆಗಳ ಬಗ್ಗೆ ನಿನ್ನೆ ಮಾನ್ಯ ರಾಮದೇವ್ ಅವರು, ಮಳ್ಳೂರು ಆನಂದರಾವ್ ಅವರು ಮಾತನಾಡುತ್ತಾ ಇದು ಗಂಭೀರ ಘಟನೆ, ಇದರ ಬಗ್ಗೆ ನಾವು ಚಳುವಳಿ, ಹೋರಾಟ ಮಾಡಬೇಕಾದೀತು ಎಂದು ಮೇಲಿಂದ ಮೇಲೆ ಹೇಳತಕ್ಕ ಪ್ರಚೋದನೆಯನ್ನು ಕಡಿಮೆ ಮಾಡಬೇಕು. ವಿದ್ಯಾಮಂದಿರಗಳಲ್ಲಿ ಇಂಥ ಘಟನೆಗಳು ಆಗದಂತೆ ಸರ್ಕಾರದವರು ಲಕ್ಷ್ಯ ವಹಿಸಬೇಕು, ಸರ್ಕಾರದವರು ಈ ವಿಷಯದಲ್ಲಿ ಗಂಭೀರ ರೀತಿಯಿಂದ ವಿಚಾರ ಮಾಡಿ ಇದರಲ್ಲಿ ಯಾವ ಅಧಿಕಾರಿಗಳು ತಪ್ಪಿತಸ್ಥರು ಇದ್ದಾರೆ, ಯಾರು ಇದರ ಹಿಂದಿದ್ದಾರೆ, ಎನ್ನುವುದನ್ನು ಕಂಡುಹಿಡಿದು ಅವರಿಗೆ ತಕ್ಕ ಶಿಕ್ಷೆ ಆಗಬೇಕು. ಹರಿಜನರ ಸಲುವಾಗಿ ಇಂಥ ಅತ್ಯಾಚಾರಗಳು ನಡೆದಾಗ ತಮ್ಮ ಸದಸ್ಯರು ತಮ್ಮ ಸದಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ, ಅದಕ್ಕೆ ನಮ್ಮ ಸಂಪೂರ್ಣ ಸಮ್ಮತಿ ಇದೆ. ಇವತ್ತು ಸರ್ಕಾರ ಇಲ್ಲಿ ಆಗಬೇಕು ಎಂದರೆ ಅದಕ್ಕೆ ಹರಿಜನ ಗಿರಿಜನರ ಸಂಪೂರ್ಣ ಆಶೀರ್ವಾದ ಇದೆ. ಇಂಥವರ ಒಂದು ಗೌರವವನ್ನು ಕಾಪಾಡುವುದಕ್ಕೆ ನಾವು ಸರ್ವ ತ್ಯಾಗಕ್ಕೂ ಸಿದ್ಧರಾಗಬೇಕು. ಮಾನ್ಯ ಸದಸ್ಯರುಗಳು ತಮ್ಮ ಮನೆಯ ಮರ್ಯಾದೆಯನ್ನು ಯಾವ ರೀತಿಯಾಗಿ ಕಾಯಬೇಕು ಎಂದು ಹೇಳುತ್ತಾರೋ ಅದೇ ರೀತಿಯಲ್ಲಿ ಸಮಾಜದಲ್ಲಿರುವ ಯಾವುದೇ ದುರ್ಬಲ ವರ್ಗದವರ ಗೌರವವನ್ನು ಕಾಪಾಡಲಿಕ್ಕೆ ತಕ್ಕ ಕ್ರಮ ಕೈಗೊಳ್ಳಬೇಕು ಮತ್ತು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನಾನು ಒಂದು ಕಾಲ್ ಅಟೆನ್‌ಷನ್ ನೋಟಿಸನ್ನು ಕಳುಹಿಸಿದ್ದೇನೆ. ಆಲ್ಲದೆ ಮಾನ್ಯ ಸದಸ್ಯರು ಎರಡು ಮೂರು ಸಾರಿ ನನ್ನ ಹೆಸರನ್ನು ತೆಗೆದು ಬೇರೆ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ. ಅದಕ್ಕೂ ನಾನು ನನ್ನ ಪರ್ಸನಲ್ ಎಕ್ಸಪ್ಲನೇಷನ್ ಕೊಡಬೇಕಾಗುತ್ತದೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷರೇ, ರೂಲ್ ನಂ. ೫೧೨ರ ಕೆಳಗೆ ಈ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಮಾನ್ಯ ಸದಸ್ಯರಾದ ಆರ್ಮುಗಂ ತವರಿಗೆ ಅವಕಾಶ ಕೊಟ್ಟಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಸಭೆಯಲ್ಲಿ ಚರ್ಚೆ ಮಾಡತಕ್ಕ ವಿಷಯ ಬಹಳ ಗಹನವಾದುದು. ಈ ಚರ್ಚೆಯು ತನ್ನ ವ್ಯಾಪ್ತಿಯು ಎಲ್ಲಿ ಮಿರಿದಾಗ ವಿಚಾರದ ಗಹನತ್ವ ಹಾಗೂ ತೀವ್ರತೆ ಕ್ಷೀಣವಾಗುತ್ತದೆ. ಆರೋಪ. ಪ್ರತ್ಯಾರೋಪ ಇದು ಚರ್ಚೆಯು ಎಲ್ಲಿಯ ಗಡುವು ಮಿರಿದಾಗ ಆದಕ್ಕೆ ಬೇರೆ ಬಣ್ಣ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಸಭಾಧ್ಯಕ್ಷರು ಇದನ್ನು ರೂಲ್ ೫೧೨ರ ಕೆಳಗೆ ತೆಗೆದುಕೊಂಡಾಗ ಇಂಥ ಚರ್ಚೆಗೆ ಅವಕಾಶವಿರುವುದಿಲ್ಲ. ಇದು ಒಂದು ಕೆಟ್ಟ ಸಂಪ್ರದಾಯವನ್ನು ಸಭೆಯಲ್ಲಿ ಹಾಕಿದಂತಾಗುತ್ತದೆ. ವಿಷಯದ ತೀವ್ರತೆಯನ್ನರಿತು ತಾವು ಇದಕ್ಕೆ ಅವಕಾಶ ಕೊಟ್ಟಿದ್ದೀರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಮಾನ್ಯ ಸದಸ್ಯರಾದ ತೆಕ್ಕೇಡ್ ಅವರು ಮಾತನಾಡುವಾಗ ಪಕ್ಷದ ಬಣ್ಣವನ್ನು ಹೆಚ್ಚಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಇದನ್ನು ತಿಳಿದು ನನ್ನ ಮನಸ್ಸಿಗೆ ಬಹಳ ವೇದನೆಯಾಯಿತು. ಆಡಳಿತ ನಡೆಸತಕ್ಕ ಸರ್ಕಾರ, ಇದರಲ್ಲಿ ಯಾವುದೇ ಪಕ್ಷ ಹಿಂದೆ ಇದ್ದರೆ, ಯಾರು ಇದಕ್ಕೆ ಪ್ರಚೋದನೆ ಮಾಡಿದರು, ಏನ್ನುವುದನ್ನು ತನ್ನ ಆಡಳಿತ ಯಂತ್ರದ ಮುಖೇನ ವರದಿಯನ್ನು ತರಿಸಿ ಸಭೆಯ ಮುಂದಿಡಬೇಕು. ಅದಿಲ್ಲದೆ, ಬರೀ ಮಾತನಾಡಬೇಕು ಎಂದು ಹೊರಟಾಗ, ನಾವು ನಿಮ್ಮ ಮೇಲೆ ಹೇಳಬಹುದು, ನೀವು ನಮ್ಮ ಮೇಲೆ ಹೇಳಬಹುದು. ಮಾನ್ಯ ಸದಸ್ಯರಾದ ರಾಮದೇವ್ ಅವರು ವ.ತ್ತು ಮಳ್ಳೂರು ಆನಂದರಾವ್ ಅವರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಏನು ಒಂದು ಸಮಿತಿಯವರು ಕೊಟ್ಟಂಥ ತೀರ್ಪನ್ನು ಬುಡಮೇಲು ಮಾಡಿದ್ದಾರೆ ಅದಕ್ಕೆ ವಿಶ್ವವಿದ್ಯಾನಿಲಯದಲ್ಲಿ ಅಶಾಂತಿಯಾಗಬಹುದು ಎಂದು ಹೇಳಿದ್ದಾರೆ. ಆದರ ಮೇಲೆ ಸರ್ಕಾರ ದವರು ಉತ್ತರ ಕೊಟ್ಟಿದ್ದಾರೆ, ಆದರ ಬಗ್ಗೆ ನಾನು ಲಂಬಿಸಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಸದನದ ಸದಸ್ಯರು ಇಂಥ ವಿಷಯಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದು, ಪರಿಸ್ಥಿತಿ ವಿಕೋಪಕ್ಕೆ ಹೋಗತಕ್ಕದ್ದನ್ನು ಸಭೆಯ ಗಮನಕ್ಕೆ ತರುವುದರ ಮುಖೇನ ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕಾದರೆ, ಅವರೇ ಇದರ ಹಿಂದೆ ಇದ್ದಾರೆ ಎನ್ನುವ ಭಾವನೆ ಬರತಕ್ಕ ರೀತಿಯಲ್ಲಿ ಮಾತನಾಡಿದರೆ, ಮುಂದೆ ನಾವು ಈ ಸದನದಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ನಾವು ಯಾರೂ ಇಲ್ಲಿ ಕುಳಿತು ಕೆಲಸ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ದಯಮಾಡಿ ಈ ವಿಷಯವನ್ನು ಪರಿಶೀಲನೆ ಮಾಡಬೇಕು, ಯಾರೇ ಆಗಲೀ, ಯಾವುದೇ ರಾಜಕೀಯ ಪಕ್ಷವಾಗಲೀ ಇಂಥ ಘಟನೆಗಳ ಹಿಂದೆ ಇದ್ದರೆ, ಕಂಡುಹಿಡಿದು ಶಿಕ್ಷೆ ಮಾಡಬೇಕಾಗುತ್ತದೆ. ಮತ್ತು ಮಾನ್ಯ ಸದಸ್ಯರುಗಳು ಇದಕ್ಕೆ ಬಣ್ಣ ಕೊಟ್ಟು ಮಾತನಾಡುವುದನ್ನೂ ರದ್ದು ಮಾಡಬೇಕಾಗುತ್ತದೆ. ಘಟನೆ ಏನು ನಡೆದಿದೆ, ಅದರ ಬಗ್ಗೆ ನಮ್ಮ ಪಕ್ಷದವರು ಸಭೆಯಲ್ಲಿ ಹೇಳಿ ಸರ್ಕಾರ ತನ್ನ ಕರ್ತವ್ಯ ಲೋಪ ಮಾಡದಂತೆ ಹೇಳಿದ್ದಾರೆ. ಮಾನ್ಯ ಆರ್ಮುಗಂ ಅವರು ಕಾನೂನು ಬದಲಾವಣೆ ಮಾಡುವ ವಿಷಯವನ್ನು ಹೇಳಿದರು. ಇದು ಕೇಂದ್ರ ಸರ್ಕಾರದವರು ಮಾಡುವುದಲ್ಲ, ರಾಜ್ಯ ಸರ್ಕಾರದವರು ಮಾಡಬೇಕಾಗುತ್ತದೆ.

2-00 P.M.

ಕಾನೂನು ಪಾಲನೆ ಮಾಡುವುದಕ್ಕೆ ದೆಹಲಿ ಕಡೆ ಏತಕ್ಕೆ ನೋಡಬೇಕು ? ರಾಜ್ಯ ಸರ್ಕಾರಕ್ಕೇ ಶಕ್ತಿ ಇದೆ. ಮುಖಿಲಿ ಮೇಲೆ ಅತ್ಯಾಚಾರ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಯಾವ ಅಧಿಕಾರಿ ಸ್ಥಳದಲ್ಲಿದ್ದ ಅಂಥವನ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಿ. ನಾವು ಯಾರು ಇಂಥ ವಿಚಾರವನ್ನು ಸಮರ್ಥನೆ ಮಾಡುವುದಕ್ಕೆ ನಿಂತಿಲ್ಲ. ಇದಕ್ಕೆ ಜಾತೀಯ ಬಣ್ಣ ಹಚ್ಚುವುದು ಬೇಡ. ಸ್ವತಂತ್ರ ಭಾರತದಲ್ಲಿ ಅಪಮಾನಕರವಾದ ರೀತಿಯಲ್ಲಿ ಯಾರೇ ವರ್ತಿಸಿದರೂ ಅವರ ಬಗ್ಗೆ ಸರ್ಕಾರದ ಜವಾಬ್ದಾರಿ ಇದೆ. ಅದಕ್ಕೋಸ್ಕರ ಇಂಥ ವಿಚಾರಗಳಲ್ಲಿ ಜಾತೀ ಬಣ್ಣ ಇನ್ನಾವುದೇ ಬಣ್ಣ ಹಚ್ಚುವುದು ಬೇಡ. ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರವಾಗಿ ಬಾಳತಕ್ಕಂಥ ಜವಾಬ್ದಾರಿಯನ್ನು ಹೊತ್ತಿದ್ದಾನೆ. ಅದರಲ್ಲಿಯೂ ಹರಿಜನ ಮುಖಿಲಿ ದುರ್ಬಲ ವರ್ಗಕ್ಕೆ ಸೇರಿದ ಮುಖಿಲಿ ಮೇಲೆ ಇಂಥ ಒಂದು ಅನ್ಯಾಯವಾಗಿರತಕ್ಕಂಥಾದ್ದು ಖಂಡನೀಯ. ಇದರ ಬಗ್ಗೆ ಹೆಚ್ಚು ಜಾಗ್ರತೆ ವಹಿಸಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಈಗಾಗಲೇ ವಿರೋಧಪಕ್ಷದ ಮುಖಂಡರು ಮಾತನಾಡಿದ್ದಾರೆ. ಮತ್ತೆ ಇದನ್ನು ಮುಂದುವರಿಸುವುದು ಬೇಡ. ಸರ್ಕಾರ ಈ ಕೃತ್ಯವನ್ನು ಎಸಗಿರುವ ದುಷ್ಟಶಕ್ತಿಗಳನ್ನು ಸದೆಬಡಿಯುವ ಬಗ್ಗೆ ಶೀಘ್ರವೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೇ, ನಾನು ವಿಧಾನಪರಿಷತ್ತಿನಲ್ಲಿ ೬ ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಸದಸ್ಯರು ನನ್ನ ಹೆಸರನ್ನು ಮತ್ತು ರಾಂದೇವ್‌ರವರ ಹೆಸರನ್ನು ಮೂರು ಬಾರಿ ಹೇಳಿದ್ದಾರೆ. ನನ್ನ ಹೆಸರು ಹೇಳದೆ ಇದ್ದಿದ್ದರೆ ನಾನು ಮಾತನಾಡುತ್ತಾ ಇರಲಿಲ್ಲ.....

ಅಧ್ಯಕ್ಷರು.—ಸಭೆ ಮತ್ತು ಈ ವಿಚಾರವಾಗಿ ಚರ್ಚೆ ಮಾಡಬಹುದೆಂದು ಇಚ್ಛಿಸಿದರೆ ನನ್ನ ಅಭ್ಯಂತರ ಇಲ್ಲ. ಈ ಘಟ್ಟದಲ್ಲಿ ನಾನು ಏನು ಮಾಡುವುದಕ್ಕೆ ಆಗುತ್ತದೆ ? ತಾವೇ ಯೋಚನೆ ಮಾಡಿ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಹೆಸರು ಹೇಳಿರುವುದರಿಂದ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಬೇಕೋ ಬೇಡವೋ ? ಮಾನ್ಯ ದೇವೇಗೌಡರು ಹೇಳಿರುವುದರಿಂದ ಈ ವಿಚಾರದ ಬಗ್ಗೆ ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಅಲ್ಲಿ ಪ್ರಯೋಜನೆ ಮಾಡಿದ್ದೇವೆ ಎನ್ನುವ ಅರ್ಥ ಬರುವಂತೆ ಹೇಳಿದ್ದಾರೆ. ಇಲ್ಲಿ ದೊಡ್ಡ ದೊಡ್ಡ ಮಂತ್ರಿಗಳು ಇದ್ದಾರೆ, ಸಹೋದ್ಯೋಗಿಗಳು ಇದ್ದಾರೆ ಆರು ವರ್ಷದಲ್ಲಿ ಇಂಥ ಕೆಲಸ ಮಾಡಿದ್ದೇನೆಂದು ಹೇಳಲಿ.

ಶ್ರೀಮತಿ ಎಸ್. ಪ್ರಮೀಳ.—ಅಧ್ಯಕ್ಷರೇ, ಹೆಣ್ಣುಮಕ್ಕಳ ವಿಚಾರದಲ್ಲಿ ಮಾತನಾಡುವುದಕ್ಕೆ ಹೆಣ್ಣುಮಕ್ಕಳಿಗೆ ಅವಕಾಶ ಕೊಡದೆ ಇದ್ದರೆ ಹೇಗೆ ? ಹೆಣ್ಣುಮಕ್ಕಳ ಗತಿ ಗೋವಿಂದಾನೆ. ದಯವಿಟ್ಟು ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀಮತಿ ಸೆಲ್ವಿದಾಸ್‌ರವರು ನನ್ನ ಪರವಾಗಿ ಮಾತನಾಡಬೇಕೆಂದು ಕೇಳಿಕೊಂಡಿದ್ದಾರೆ.

ಅಧ್ಯಕ್ಷರು.—ಅದು ಆಗುವುದಿಲ್ಲ. ಈ ಕಡೆ ಕೊಟ್ಟರೆ ಆ ಕಡೆಯವರು ಕೇಳುತ್ತಾರೆ.

ಶ್ರೀಮತಿ ಎಸ್. ಪ್ರಮೀಳ.—ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಡದಿರುವ ಕಾರಣ ಸಭೆಯಿಂದ ಹೊರಗೆ ಹೋಗುತ್ತೇನೆ.

(ಶ್ರೀಮತಿ ಎಸ್. ಪ್ರಮೀಳ ಮತ್ತು ಶ್ರೀಮತಿ ಅನಸೂಯ ಗಜಾನನಶರ್ಮ ಇಬ್ಬರೂ ಸಭೆಯಿಂದ ನಿರ್ಗಮಿಸಿದರು)

† ಶ್ರೀ ಎಸ್. ಸುಬ್ಬಯ್ಯಶೆಟ್ಟಿ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಿನ್ನೆ ವಿಶ್ವವಿದ್ಯಾನಿಲಯದಲ್ಲಿ ನಡೆದ ಘಟನೆ ಬಗ್ಗೆ ಮಾನ್ಯ ಆರ್ಮುಗಂರವರು ಅದೇ ರೀತಿ ಮಾನ್ಯ ಶಾಮಣ್ಣನವರು ಇತರ ಗೆಳೆಯರೂ ಕೂಡ ಈ ಒಂದು ಘಟನೆಯನ್ನು ಖಂಡಿಸಿ ತಮ್ಮ ಕಳಕಳಿಯನ್ನು ಈ ಸಭೆಯಲ್ಲಿ ವ್ಯಕ್ತ ಪಡಿಸಿದ್ದಾರೆ. ಏನು ಘಟನೆ ನಿನ್ನೆ ನಡೆದಿದೆ ಇದು ಇಡೀ ನಮ್ಮ ವಿದ್ಯಾರ್ಥಿ ಏನು ಒಂದು ಸಮುದಾಯ ಇದೆ ಆ ಒಂದು ವಿದ್ಯಾರ್ಥಿ ಸಮುದಾಯಕ್ಕೆ ನಾಚಿಕೆ ತರುವಂತ ಘಟನೆ ಮಾತ್ರವಲ್ಲ, ಕರ್ನಾಟಕ ರಾಜ್ಯಕ್ಕೆ ನಾಚಿಕೆ ತರುವಂತ ಘಟನೆ ನಿನ್ನೆ ನಡೆದಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು ಎಂದು ನನ್ನ ಮನಸ್ಸಿಗೆ ಅನಿಸುತ್ತೆ. ಇಂಥ ಒಂದು ಘಟನೆಯನ್ನು ಎಲ್ಲಾ ಸದಸ್ಯರೂ ಕೂಡ ಖಂಡನೆ ಮಾಡಿದ್ದಾರೆ. ಈ ರೀತಿ ಎಲ್ಲರೂ ಖಂಡನೆ ಮಾಡಿರುವುದರಿಂದ ಇದು ಇಡೀ ಸಭೆಯ ಒಂದು ಅಭಿಪ್ರಾಯವನ್ನು ಇದು ವ್ಯಕ್ತಪಡಿಸುತ್ತದೆ ಎಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ನಿನ್ನೆ ಅಲ್ಲಿ ಘಟನೆ ನಡೆದಾಗ ಅಲ್ಲಿ ನಮ್ಮ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಶ್ರೀಮತಿ ಸೆಲ್ವಿದಾಸ್‌ರವರ ಮೇಲೆ ಕೆಲವು ವಿದ್ಯಾರ್ಥಿಗಳು ಹಲ್ಲೆ ನಡೆಸಿದಾಗ ಯಾರು ಪೋಲೀಸ್ ಸಿಬ್ಬಂದಿ ಇತ್ತು ಅವರು ನಿಜವಾದ ಪ್ರೊಟಕ್ಷನ್ ಕೊಡಬೇಕಾಗಿತ್ತು. ಆದರೆ ಹೆಚ್ಚಿನ ಪ್ರೊಟಕ್ಷನ್ ಸಿಗಲಿಲ್ಲ, ಅಲ್ಲಿ ಕರ್ತವ್ಯ ಲೋಪವಾಗಿದ್ದರಿಂದ ಅಲ್ಲಿ ಡ್ಯೂಟಿಯಲ್ಲಿದ್ದ ಸಬ್‌ಇನ್ಸ್‌ಪೆಕ್ಟರನ್ನು ಸಸ್ಪೆನ್‌ಷನ್‌ನಲ್ಲಿ ಈಗಾಗಲೇ ಇಡಲಾಗಿದೆ. ಅಲ್ಲದೆ ಅದಕ್ಕೆ ಕಾರಣರಾದ ಯಾರು ತಪ್ಪಿತಸ್ಥರು ಇದ್ದಾರೆ ಅವರಲ್ಲಿ ಮೂರು ಜನರನ್ನು ಅರೆಸ್ಟ್ ಮಾಡಿ ಕೇಸನ್ ರಿಜಿಸ್ಟರ್ ಆಗಿವೆ. ಈ ಕೇಸನ್‌ನಲ್ಲಿ Under the protection of Civil Rights Act ಕೂಡ ಒಂದು ಕೇಸನ್ನು ರಿಜಿಸ್ಟರ್ ಮಾಡಿದೆ. ಶ್ರೀಮಾನ್ ಮಾನ್ಯ ಸದಸ್ಯರು ಏನು ಒಂದು ಮಾತು ಹೇಳಿದರು ಯಾವುದೇ ರೀತಿ ಬೈದಿದ್ದಾರೆ ಅಂತ ಹೇಳಿದರು. That constitutes an offence under the Act and that is why a case has also been booked. This is the action taken on the dastardly episode which occured yesterday in the university campus.

The Government in unequivocal terms condemns this sort of attitude, this sort of behaviour by any student, and I think that nobody should get protection in the lable of a student. If anybody does this, I am not prepard to call him as a student. I reciprocate the feelings of the members in this episode, and I appeal to our members and through the Members of this House to the student community at large that the issues have to be settled peacefully. When hooliganism is resorted to, that itself becomes an issue. A wrong cannot be justified by another wrong, and in yesterday's incident a wrong was tried to be justified by another wrong and it should be condemned along with whatever wrong that had happened earlier. Yesterday, there were some adjournment motions on the subject and today also, I believe, notice of adjournment motion was given and the Chair was pleased to order that this adjournment motion could be converted into a Call-Attention motion and I am ready with a statement for the Call-Attention Notice. If the Chair permits to go ahead with the statement, I am prepared to read it.

An enquiry Committee (consisting of seven persons) appointed by the Bangalore University investigated into the alleged malpractices by seven students in the Final Examination in Economics held in April/May 1974. The charges were that these students fraudulently obtained additional answer books with the intention of misusing them in the written examination held on 13th, 15th, 17th and 20th May, 1974 and fraudulently inserted these additional answer books to the main answer books either on the day of the Examination or subsequently before the answer books were sent to the first valuer, the answers in these additional answer books having been written not in the examination hall but outside and thus committed offence which amounted to malpractice in examination and hence were liable to be punished according to the Rules of the University.

2. The Committee (excepting for one Member) held four students guilty and three students not guilty of the charges. The dissenting Member agreeing the Report of the Committee that three students were not guitly, he further held that out of the remaining four students two students were not guitly.

3(a) The Syndicate, at its meeting held on 14th March 1978, considered the above Reports. One Member proposed the following Resolution seconded by another Member :—

"In view of the divergent findings of the Reuben Committee and with special reference to the disent note and for reasons known to the then administration of the University in the matter of the two

letters referred to the Syndicate by Sri Mohan Rangam and Smt. Ambujakshi it is hereby resolved keeping in view of the fact that the examination was held in April 1974 and we are taking a decision in 1978, and in the peculiar circumstances it is resolved that all examinees be exonerated without discrimination. It is further resolved that the results be announced as valued by all examiners based on their performance of 1974 examination as if there had been no mal-practice."

(b) The resolution was carried, five members in favour of it and three members against it. The Vice-Chancellor recorded his dissent in the following words :—

"Personally I would have preferred re-examination to be ordered for seven candidates as there is sufficient evidence that the answer scripts now found are suspect and not fit to be valued."

(c) The other two dissenting members recorded as follows :—

"Since it is beyond doubt that at least in certain answer scripts extraneous and foreign material was found by unauthorised insertion which cannot be by any length of imagination be considered as authentic and genuine, it is strongly pointed out to the University authorities that it is un-academic and unethical to assess such unauthorised material and announced the results thereon, thereby undermining the academic prestige and the reputation of the University. The fact that a long lapse of four years has gone by and other un-academic factors should not be permitted in this case could the pristine pure academic image of the University. Hence our dissent."

4. The Syndicate which met on 20th March 1978, while confirming the proceedings of the earlier meeting wanted the above matter to be reconsidered as one Member expressed that he had no time to go through the committee Report in detail at the time of the previous meeting and requested the matter to be considered a fresh. This was supported by two other Members who had earlier supported the Resolution referred to in para 3(a) above. One Member who could not attend the earliermeeting also wanted the matter to be reconsidered.

5. The Vice-Chancellor in exercise of his powers allowed the subject to be brought up again at the meeting. The Syndicate has unanimously resolved as follows :

"Having considered the reports in its various aspects and the fact that the evidence has been brought regarding inserted

materials in the answer scripts of all the seven candidates, the Syndicate unanimously resolved as follows :

(*a*) That the benefit of the examination they took in May 1974 shall not be given to all the seven candidates in question and

(*b*) Considering the fact that they have not been allowed to appear for the examinations since 1974 till now, all the seven candidates permitted to appear for any examinations to be conducted by University hereafter, as per Rules of the University.

c) The Syndicate also placed on record its thanks to the Chairman and Members of the New Special Enquiry Committe for their report.

6. On 16-3-1978 a group of 50 students led by one Sri Rangaswamy hijacked a University Bus and went to Raj Bhavan. They met the Governor and presented a Memorandum against the decision of the Syndicate. A case has been registered and is under investigation for this offence. Four students have been arrested by the Police. They are released on bail by the Court.

7. On 17-3-1978 some students numbering about 200, caused damage to the Administrative Building of the University and they pressed their demand before the Vice-Chancellor. In this connection also a case has been registered and is under investigation by the Police.

8. On 20-3-1978, about 250 students got into seven buses of the University and came to the Senate Hall. At about 2-45 P.M. about 50 students entered the room of the Vice-Chancellor and ransacked and damaged the telephone, furniture and other office equipments. The Vice-Chancellor also received slight injury in the cource of this incident. Miss. Selvie Das, Director of Collegiate Education and Sri Bhavikatti, Director of Technical Education were also pushed about by the agitating students. Three cases have been registered in this connection and three student leaders have been arrested.

SRI T. R. SHAMANNA.—Sir, it was not stated what action will be taken against the culprits ?

SRI B. SUBBAIAH SHETTY.—The Court will take action.

SRI B. B. SANAYAK.—Who are the persons arrested ?

SRI B. SUBBAIAH SHETTY. Sriyuths Rangaswamy, Krishnappa and Ramaiah. These are the students who have been produced before the Court.

ಶ್ರೀ ಪಿ. ರಾಮದೇವ್.—೧೯೭೪ನೇ ಇಸವಿಯಲ್ಲಿ ಪರೀಕ್ಷೆಯಲ್ಲಿ ಮಾಲ್ ಪ್ರಾಕ್ಟೀಸ್ ನಡೆದಿದೆ ಎಂದು ವರದಿಯಲ್ಲಿ ಇದೆ. ಇದರ ಬಗ್ಗೆ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದು ೧೯೭೪ರಲ್ಲಿ. ಅವರು ಯಾವಾಗ ರಿಪೋರ್ಟ್ ಕೊಡಬೇಕಾಗಿತ್ತು, ಯಾವಾಗ ಕೊಟ್ಟಿದ್ದಾರೆ ಎಂದು ನೋಡಿದರೆ ೧೯೭೮ನೇ ಇಸವಿಯಲ್ಲಿ ಅವರು ರಿಪೋರ್ಟ್ ಕೊಟ್ಟಿದ್ದಾರೆ. ಯೂನಿವರ್ಸಿಟಿಯ ಪದ್ಧತಿಯೇ ಹೀಗೆ ಎಂದು ಕಾಣುತ್ತದೆ. ಮಾಲ್ ಪ್ರಾಕ್ಟೀಸ್ ನಡೆದಿರುವ ಬಗ್ಗೆ ವರದಿಯನ್ನು ಕೊಡಲು ಕಮಿಟಿಯವರು ೪ ವರ್ಷಗಳ ಅವಧಿಯನ್ನು ತೆಗೆದುಕೊಂಡಿದ್ದಾರೆ. ಇಷ್ಟು ದೀರ್ಘ ಅವಧಿಯನ್ನು ಅವರು ತೆಗೆದು ಕೊಳ್ಳಲು ಕಾರಣವೇನು ಎಂಬುದನ್ನು ದಯವಿಟ್ಟು ತಿಳಿಸಬೇಕು.

SRI B. SUBBIAH SHETTY.—If more details are needed. under the rules and regulation if the hon. member gives notice, I shall be able to give the details.

ಶ್ರೀ ಎಚ್.ಡಿ. ದೇವೇಗೌಡ.—ಈಗ ಸಿಂಡಿಕೇಟ್ ಮತ್ತು ಸೆನೆಟ್ ಎರಡಕ್ಕೂ ಸಹ ಸದಸ್ಯರನ್ನು ನಾಮಕರಣ ಮಾಡಿರತಕ್ಕವರು ಸರ್ಕಾರದವರು. May I know whether the Government thinks that the Syndicate members should continue further or they should be debarred, because they are the root cause for all these things ? They have created an atmosphere for provocation in the University campus. Will the Government reconsider the whole issue and see that these syndicate members are debarred and nominate fresh people ?

SRI B. SUBBIAH SHETTY.—The suggestion of the hon. member Sri Deve Gowda is noted.

ಅಧ್ಯಕ್ಷರು.—ಈಗ ಇದುವರೆಗೆ ಈ ವಿಷಯದ ಮೇಲೆ ಸುಮಾರು ಒಂದೂವರೆ ಗಂಟೆ ಚರ್ಚೆ ನಡೆದಿದೆ. ಇನ್ನು ಬೇರೆ ಸಬ್ಜೆಕ್ಟಿಗೆ ಹೋಗೋಣ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಸ್ವಾಮಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಆ ೭ ಜನ ವಿದ್ಯಾರ್ಥಿಗಳ ಮೂಲವನ್ನು ಪರೀಕ್ಷೆ ಮಾಡಿದರೆ ಏನು ಗೊತ್ತಾಗುತ್ತದೆ ಎಂದರೆ ಅವರು ಫಸ್ಟ್ ಕ್ಲಾಸ್ ಡಿಗ್ರಿಗಳನ್ನು ಪಡೆದುಕೊಂಡು ಅದರ ಆಧಾರದ ಮೇಲೆ ದೊಡ್ಡ ಹುದ್ದೆಗಳನ್ನು ಪಡೆದುಕೊಂಡು ನಮ್ಮ ರಾಜ್ಯದ ಆಡಳಿತವನ್ನು ನಡೆಸುವಂತಹ ಕೆಲಸಕ್ಕೆ ಹೊರಟಿದ್ದಾರೆ ಎಂದು ಕಾಣುತ್ತದೆ ಇಂಥಾ ಪ್ರವೃತ್ತಿ ಆವರಲ್ಲಿ ಬೆಳೆಯುವುದಾದರೆ ರಾಜ್ಯದ ಬೇರೆ ಜನಗಳ ಸ್ಥಿತಿಗತಿಗಳು ಏನಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ತಂದೆ ತಾಯಿಗಳು ಕಷ್ಟಪಟ್ಟು ತಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡಬೇಕು ಎಂದು ಕಾಲೇಜಿಗೆ ಕಳುಹಿಸಿದರೆ ಅವರು ಮೋಸ ಮಾಡಿಕೊಂಡು ಒಳ್ಳೆಯ ರ್ಯಾಂಕ್ ಪಡೆದುಕೊಂಡು ಒಳ್ಳೆಯ ಹುದ್ದೆಗಳನ್ನು ಪಡೆದುಕೊಳ್ಳುವ ಕೆಟ್ಟ ಪ್ರವೃತ್ತಿ ಬೆಳೆಯಬೇಕಾದರೆ ಮೂಲ ಕಾರಣವೇನೆಂಬುದನ್ನು ಕಂಡುಹಿಡಿಯಬೇಕು. ಮತ್ತು ವಿದ್ಯಾರ್ಥಿಗಳು ಆ ರೀತಿ ಗಲಾಟೆ ಮಾಡಿದ್ದು ತಪ್ಪು ಈ ರೀತಿ ಗಲಾಟೆ ಮಾಡಿದ ವಿದ್ಯಾರ್ಥಿಗಳ ಬಗ್ಗೆ ಸರ್ಕಾರದವರು ಏನು ಕ್ರಮತೆಗೆದುಕೊಳ್ಳುತ್ತಾರೆ. ಒಬ್ಬ ಹುಡುಗನ ತಂದೆತಾಯಿಗಳಿಬ್ಬರೂ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿದ್ದಾರೆ ಎಂದು ನಾನು ಕೇಳಿದ್ದೇನೆ. ಈ ಸಂಸ್ಥೆಗಳ ತಾರ್ಯ ಕಲಾಪಗಳನ್ನು ನಡೆಸತಕ್ಕಂಥಾ ವ್ಯಕ್ತಿಗಳ ಮನೆಯ ಹುಡುಗನೇ ಇಂಥಾ ಒಂದು ತಪ್ಪು ಮಾಡಿರುವಾಗ ಈ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರು ಮಾಡಿರತಕ್ಕ ತೀರ್ಮಾನದ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಮಳ್ಳೂರ್ ಆನಂದರಾವ್.—ಈಗ ಸರ್ಕಾರದವರು ಒಂದು ಹೇಳಿಕೆಯನ್ನೇನೋ ಮಾಡಿದರು. ಆದರೆ ಮೂಲ ಸಮಸ್ಯೆ ಏನಿದೆ ಎಂಬುದನ್ನು ನೋಡಬೇಕು. ಹಿಂದೆ ೧೯೭೪ನೇ ಇಸವಿಯಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಒಂದು ಅವ್ಯವಹಾರ ನಡೆದಿದೆ. ಆದ್ದರಿಂದ ಈ ವಿಶ್ವವಿದ್ಯಾನಿಲಯದ ಮೂಲಕ್ಕೆ ಹೋಗಿ ಅಲ್ಲಿರತಕ್ಕ ಶಕ್ತಿಯನ್ನು ಮೂಲೋತ್ಪಾಟನೆ ಮಾಡಬೇಕು. ಅದನ್ನು ಮೂಲೋತ್ಪಾಟನೆ ಮಾಡದಿದ್ದರೆ ಯೂನಿವರ್ಸಿಟಿಯು ಹಾಳಾಗಿ ಹೋಗುತ್ತದೆ. ಇದರಲ್ಲಿ ಎರಡು ಇಷ್ಯೂ ಇವೆ. ಒಂದು ಲಾ ಅಂಡ್ ಆರ್ಡರ್ ಬಗ್ಗೆ ಹೇಳುವುದಾದರೆ ಅಲ್ಲಿ ಒಂದು ಹೀನ ಕೃತ್ಯ ನಡೆದಿದೆ

ಅದರ ಬಗ್ಗೆ ತೀವ್ರ ಗಮನ ಕೊಟ್ಟು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ಯೂನಿವರ್ಸಿಟಿಯಲ್ಲಿ ಈ ರೀತಿಯ ಒಂದು ಗಲಾಟೆಯು ನಡೆಯಬೇಕಾದರೆ ಕಾರಣ ೪ ಜನ ಎಂ.ಎ. ವಿದ್ಯಾರ್ಥಿಗಳು ಇದ್ದಾರೆ. ಅವರು ಮತ್ತು ಒಬ್ಬ ಹುಡುಗನ ತಂದೆ ಶ್ರೀಮಾನ್ ಮೋಹನ್ ರಂಗಂ ಎನ್ನುವವರು ಸಿಂಡಿಕೇಟ್ ಸದಸ್ಯರಾಗಿದ್ದಾರೆ. ಅವರ ತಾಯಿ ಸೆನೆಟ್ ಸದಸ್ಯರಾಗಿದ್ದಾರೆ. ಈ ಗಲಾಟೆ ನಡೆಯುವುದಕ್ಕೆ ಮೂಲ ಕಾರಣರಾದವರ ಹೆಸರನ್ನು ಹೇಳುವುದಕ್ಕೆ ಶ್ರೀಮಾನ್ ದೇವೇಗೌಡರು ಸ್ವಲ್ಪ ಹಿಂದೇಟು ಹಾಕಿದರು. ನಾನು ಬೇಕಾದರೆ ತಮಗೆ ಅವರ ಹೆಸರುಗಳನ್ನು ಹೇಳುತ್ತೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ನನ್ನ ಚೇಂಬರಿಗೆ ಬಂದು ಮಾಹಿತಿಯನ್ನು ಕೊಡಿ. ಆ ಬಗ್ಗೆ ನಾವು ಮಾತನಾಡೋಣ.

ಶ್ರೀ ಕೆ.ಎಚ್. ರಂಗನಾಥ್.—ಇಲ್ಲಿ ಏನು ಬೇಕಾದರೂ ಮಾತನಾಡುವ ಹಾಗಿಲ್ಲ.

ಶ್ರೀ ಮಳ್ಳೂರ್ ಆನಂದರಾವ್.—ನಾನು ನಿಮ್ಮ ಸಹಾಯಕ್ಕೆ ಬರುತ್ತಿದ್ದೇನೆ. ಈ ಒಂದು ವಿಶ್ವವಿದ್ಯಾನಿಲಯದ ಘಟನೆಗೆ ಸಂಬಂಧಪಟ್ಟವರ ಹೆಸರುಗಳನ್ನು ಹೇಳಬಾರದು ಎಂದು ಇರುವುದರಿಂದ ಶ್ರೀಮಾನ್ ದೇವೇಗೌಡರು ಅವರ ಹೆಸರುಗಳನ್ನು ಹೇಳಲಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಈಗ ಇರತಕ್ಕ ಸಿಂಡಿಕೇಟ್ ಸದಸ್ಯರುಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡದೆ ಇರುವುದರಿಂದ ಇಂಥಾ ಅನಾಹುತಗಳೆಲ್ಲಾ ನಡೆಯುತ್ತಿವೆ. ಆದ್ದರಿಂದ ಅವರನ್ನು ತೆಗೆದು ಹಾಕಿ ನಿಮಗೆ ಅಭಿಮಾನ ಇರತಕ್ಕವರನ್ನು ವಿದ್ಯಾ ತಜ್ಞರನ್ನು ಸಿಂಡಿಕೇಟ್‌ಗೆ ನಾಮಿನೇಟ್ ಮಾಡಬೇಕು.

ಶ್ರೀ ಕೆ.ಎಚ್. ರಂಗನಾಥ್.—ಸಿಂಡಿಕೇಟಿಗೆ ಸದಸ್ಯರನ್ನು ನಾಮಿನೇಟ್ ಮಾಡುವವರು ಛಾನ್ಸಲರ್.

SRI H.D. DEVE GOWDA.—Under the Act, the Government is going to recommend an Experts Committee for the nomination of the Vice-Chancellor. Let the Chancellor take the decision to remove all these Syndicate members. If the Chancellor has himself got the direct control over these and government is not going to come into picture, I request the Chancellor through this House to remove all the Syndicate members and have fresh nominations.

ಶ್ರೀ ಮಳ್ಳೂರು ಆನಂದರಾವ್.—ಇದಕ್ಕೆ ಮೂಲ ಯಾರು ಇದ್ದಾರೆ ಅವರೇ ಇದರ ಬಗ್ಗೆ ಜಡ್ಜ್‌ಮೆಂಟ್ ಕೊಟ್ಟಿರುವುದರಿಂದ ಇದು ಉಲ್ಬಣಗೊಂಡಿದೆ. ಇದರಿಂದ ಇ ವಿದ್ಯಾರ್ಥಿಗಳು ತಮ್ಮ ಅಕ್ಕೌಂಟನ್ನು ತೋರಿಸುತ್ತಿದ್ದಾರೆ. ಒಂದು ದೊಡ್ಡ ಗಲಾಟೆಯನ್ನು ಮಾಡಿದ್ದಾರೆ. ಆದ್ದರಿಂದ ಇದರ ಮೂಲಕ್ಕೆ ಹೋಗಿ ಇದರ ಮೂಲದಲ್ಲಿರತಕ್ಕ ಶಕ್ತಿಗಳನ್ನು ಮೂಲೋತ್ಪಾಟನೆ ಮಾಡಬೇಕು. ಆ ಶಕ್ತಿಗಳು ಯಾರು ಏಂಬುದನ್ನು ನಾನು ಹೇಳಕಾದರೆ ಹೇಳುತ್ತೇನೆ. ಅದು ಪತ್ರಿಕೆಯಲ್ಲಿಯೂ ಬಂದಿದೆ.

ಶ್ರೀ ಕೆ.ಎಚ್. ರಂಗನಾಥ್.—ಇದಕ್ಕೆ ಮಾನ್ಯ ಸದಸ್ಯರು ಪಾರ್ಟಿಯಾಗಬೇಕು.

ಶ್ರೀ ಮಳ್ಳೂರ್ ಆನಂದರಾವ್.— ಅದು ಪತ್ರಿಕೆಯಲ್ಲಿಯೇ ಬಂದಿದೆ.

2-30 P. M.

ಶ್ರೀ ಮಳ್ಳೂರ್ ಆನಂದರಾವ್,— ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ನನಗೆ ಚೆನ್ನಾಗಿ ಗೊತ್ತಿದೆ.

SRI K. H. RANGANATH.—If the hon. Member say that he knows these things, I only leave the matter to you and the House.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ರಂಗನಾಥ್ ಅವರಿಗೆ ಒಂದು ಆಳವಾದ ಅನುಭವ ಇದೆ. What he said was that all these were reported in the Press.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗೆಗ್ಗೆ ಸಾಕಷ್ಟು ಚರ್ಚೆಯಾಗಿದೆ, ಇದರ ಹಿನ್ನೆಲೆಯಲ್ಲಿ ತಪ್ಪಿತಸ್ಥರು ಯಾರಿದ್ದಾರೆ, ಅವರಿಗೆ ಶಿಕ್ಷೆಯನ್ನು ಮಾಡತಕ್ಕಂಥ ಕಾರ್ಯವನ್ನು ಸರ್ಕಾರ ಮಾಡಬೇಕು.

SRI K. BHASKAR NAIDU.—Hon. Memebr Sri Armugam raised this subject because it is a grave matter. We have discussed this thread.-bare and we have given credit that it is a fit matter for discussion. If we tried to discuss further more the very importance with which Mr. Armugam brought this matter here will lose its importance. If we still want to discuss further, some other time may be given. Otherwise it will lose its importance.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸದಸ್ಯರುಗಳು ಈ ವಿಷಯದ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಬೇಕು. ವಿಚಾರಣೆ ಮಾಡುವುದರಲ್ಲಿ ಯಾರದೂ ಆಕ್ಷೇಪ ಇಲ್ಲ. ನಮ್ಮ ಯೂನಿವರ್ಸಿಟಿ ಚೆನ್ನಾಗಿ ನಡೆಯಬೇಕು ಎನ್ನುವ ಉದ್ದೇಶ ಎಲ್ಲರಿಗೂ ಇರುವಂಥಾದ್ದೆ. ಇದರ ಹಿನ್ನೆಲೆ ಗಾಯಕರು ಯಾರಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಮಾಡಬೇಕಾಗಿದೆ. ಸಿಂಡಿಕೇಟ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಹೇಳಿದರು. According to Section 24 they are all *ex officio* Memebrs of the Syndicate. ಮತ್ತೆ ಮಾನ್ಯ ಸದಸ್ಯರಾದ ಶ್ರೀ ಮಳ್ಳೂರು ಆನಂದರಾಯರು ಒಬ್ಬರ ಹೆಸರನ್ನು ಹೇಳಿದರು. According to my information he is an elected member of the Syndicate. That is what I learnt. ಮಾನ್ಯ ಸದಸ್ಯರಾದ ಮಳ್ಳೂರು ಆನಂದರಾಯರು ಅವರು ನಾಮಿನೇಟೆಡ್ ಮೆಂಬರ್ ಎಂದು ಹೇಳಿದರು. I hope hon. Member would correct hemself.

MR. SPEAKAR.—Now we will take up the Motion of Thanks to the Governor's address.

Motion of Thanks to the Governor's Address (Debate Continued)

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮೊನ್ನೆ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣದ ಮೇಲೆ ಚರ್ಚೆ ನಡೆಯುತ್ತಾ ಇದೆ. ಬಹುಶಃ ರಾಜ್ಯಪಾಲರು ಅವರ ಭಾಷಣವನ್ನು ಚುನಾವಣೆಗಳ ಹಿನ್ನೆಲೆಯಲ್ಲಿ ಪ್ರಾರಂಭಮಾಡಿದ್ದಾರೆ. ಒಬ್ಬ ಸದಸ್ಯರು ಬಹುಶಃ ಚುನಾವಣೆಗಳು ನಡೆಯುವುದಕ್ಕೆ ಹಿಂದೆ ೨ ತಿಂಗಳ ಕಾಲ ಈ ರಾಜ್ಯದಲ್ಲಿ ರಾಷ್ಟ್ರಪತಿಯವರ ಆಡಳಿತ ವನ್ನು ತಂದಿದ್ದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿರಲಿಲ್ಲ. It was undemocratic ಎಂದು ಹೇಳುವ ಮಟ್ಟಕ್ಕೆ ಹೋದರು. ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್ ಅವರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಆಕಡೆ ಕುಳಿತುಕೊಂಡಿರತಕ್ಕಂಥ ಸದಸ್ಯರನ್ನು ಕೇಳುತ್ತೇನೆ. ರಾಷ್ಟ್ರಪತಿಯವರ ಆಡಳಿತ ಈ ರಾಜ್ಯದಲ್ಲಿ ಬಂದಂಥ ಹಿನ್ನೆಲೆಯನ್ನು ತಾವು ಜ್ಞಾಪಕಮಾಡಿಕೊಳ್ಳಬೇಕು. ಆಡಳಿತ ನಡೆಸತ್ತಾ ಇರತಕ್ಕಂಥ ಪಕ್ಷಕ್ಕೆ ವಿಧಾನ ಸಭೆಯಲ್ಲಿ ಬಹುಮತ ಕಳೆದುಕೊಂಡ ಕೂಡಲೇ ರಾಜ್ಯಾಂಗದತ್ತವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಇವತ್ತು ತಮ್ಮ ಪಕ್ಷದಲ್ಲಿ ೧೫೧ ಜನ ಇದ್ದೀರಿ, ಸರ್ಕಾರ ನಡೆಸುತ್ತಾ ಇದ್ದೀರಿ. ೫೦ ಜನ ಈ ಕಡೆ ಬಂದರೆ ಸರ್ಕಾರದ ಪರಿಸ್ಥಿತಿ ಏನಾಗುತ್ತದೆ. ಅಂತಹ ಕಾಲದಲ್ಲಿ ರಾಷ್ಟ್ರಪತಿಯವರ ಆಡಳಿತ ಈ ರಾಜ್ಯದಲ್ಲಿ ತಂದರೆ ಅದು ಅನ್ ಡೆಮಾಕ್ರಟಿಕ್ ಆಗುವುದೇ ಎನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಎಣಿಕೆ ಎಲ್ಲಿ ಪ್ರಾರಂಭವಾಗಬೇಕು ?

ಶ್ರೀ ಎಂ. ಸಿ. ಬಸಪ್ಪ.—ರಾಜ್ಯಪಾಲರ ಮುಂದೆ ಪ್ರದರ್ಶನ ನಡೆದಿದೆ. ರಾಜ್ಯಪಾಲರು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ.